# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಸೋಮವಾರ, ಜನವರಿ 16, 2023

ಸಂಪುಟ : 49 ಸಂಚಿಕೆ : 244 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com














# ಕಾವಿಧಾರಿಗಳಿಗಿಂತ ಹೆಚ್ಚಿನ ಗೌರವ ಸಿದ್ದೇಶ್ವರ ಸ್ವಾಮೀಜಿಗಿತ್ತು



ಹರಜಾತ್ರೆಯಲ್ಲಿ ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಶ್ರೀಗಳವರಿಗೆ ನುಡಿನಮನ ಕಾರ್ಯಕ್ರಮವನ್ನು ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.

**(1ನೇ ಪುಟದಿಂದ)** ತಾಲ್ಲೂಕಿನ ಬಿಜ್ಜರಗಿ ಗ್ರಾಮದಲ್ಲೂ 3600 ಕೋಟಿ ರೂ. ವೆಚ್ಚದ ನೀರಾವರಿ ಯೋಜನೆ ಜಾರಿಗೊಳಿಸಿ ರೈತರಿಗೆ ಅನುಕೂಲ ಮಾಡಿಸಿಕೊಟ್ಟಿದ್ದಾರೆ. ಆ ನೀರಾವರಿ ಯೋಜನೆಗೆ ಸಿದ್ದೇಶ್ವರ ಶ್ರೀಗಳನ್ನು ಎಂ.ಬಿ. ಪಾಟೀಲರು ಕರೆದಾಗ ಶ್ರೀಗಳು ಬರಲಿಲ್ಲ. ಸುತ್ತೂರು ಶ್ರೀಗಳು ಬಂದು ಕರೆದಾಗ ಜೊತೆಗೂಡಿ ತಮ್ಮೂರಿನ ನೀರಾವರಿ ಯೋಜನೆ ಉದ್ಘಾಟಿಸಿದ್ದರೆಂದು ಸಿರಿಗೆರೆ ಶ್ರೀಗಳು ನೆನಪಿಸಿಕೊಟ್ಟರು.

ಈ ನಿಟ್ಟಿನಲ್ಲಿ ವಚನಾನಂದ ಶ್ರೀಗಳ ಸಾಮಾಜಿಕ ಚಿಂತನೆ ಮಾದರಿಯಾಗಿದ್ದು, ಸಮಾಜದ ಜನರಿಗಾಗಿ ನ್ಯಾಯ ಒದಗಿಸಲು ಹೋರಾಟ ಮಾಡುತ್ತಿರುವುದನ್ನು ಶ್ಲಾಘಿಸಿದ ಶ್ರೀಗಳು, ವಚನಾನಂದ ಶ್ರೀಗಳು ಶ್ವಾಸ ಗುರುಗಳಾಗಿದ್ದು, ಅವರು ಉಸಿರಾಡುವವರೆಗೂ ಸಮಾಜ ಉಸಿರಾಡುತ್ತದೆ. ಅವರು ಉಸಿರು ನಿಲ್ಲಿಸಿದರೆ ನಿಮಗೆ ತೊಂದರೆ ಆಗಲಿದೆ ಎಂದು ಭಕ್ತರನ್ನು ಎಚ್ಚರಿಸಿದರು.

ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ಸಿದ್ದೇಶ್ವರ ಶ್ರೀಗಳು ಜ್ಞಾನ ವೃಕ್ಷದಂತಿದ್ದರು. ಅವರು ಒಟ್ಟಾರೆ ಸಮಾಜಕ್ಕೆ ಕೊಟ್ಟಿರುವ ಸಂದೇಶಗಳು ಸೂರ್ಯ, ಚಂದ್ರರು ಇರುವರೆಗೂ ಜನರ ಮಧ್ಯ ಇರುತ್ತವೆ ಎಂದರು.

ಯಡಿಯೂರಪ್ಪನವರ ಅಧಿಕಾರಾವಧಿ ಯಲ್ಲಿ ಪಂಚಮಸಾಲಿ ಸಮಾಜಕ್ಕೆ 3ಬಿ ಸೌಲಭ್ಯ ನೀಡಲಾಗಿತ್ತು. ಈಗ ಕೇಳುತ್ತಿರುವ 2ಎ ಮೀಸಲಾತಿಯೂ ಈ ಸಮಾಜ ದಲ್ಲಿರುವ ಬಡವರಿಗೆ, ರೈತರಿಗೆ ಅಗತ್ಯವಾಗಿದ್ದು, ಶೀಘ್ರವೇ ಆ ಸೌಲಭ್ಯವೂ ಸಿಗಲಿದೆ. ಈ ನಿಟ್ಟಿನಲ್ಲಿ ಯಡಿಯೂರಪ್ಪ ಅವರು ಸಿಎಂ ಹಾಗೂ ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಿದ್ದಾರೆ ಎಂದು ವಿಜಯೇಂದ್ರ ಹೇಳಿದರು.

'ಪಂಚವಾಣಿ ಪತ್ರಿಕೆ ಬಿಡುಗಡೆ ಮಾಡಿದ ಕೇಂದ್ರ ಸರ್ಕಾರದ ಗಣಿ ಮತ್ತು ಕಲ್ಲಿದ್ದಲು ಸಚಿವ ಪ್ರಹ್ಲಾದ್ ಜೋಷಿ ಮಾತನಾಡಿ, ಅಧ್ಯಾತ್ಮಿಕವಾಗಿ ಮೂಲ ಚಿಂತನೆ ಹೊಂದಿರುವ ಸಾಮಾಜಿಕ ಬದುಕು ನಮ್ಮದಾಗಿದ್ದು, ಸಮಾಜಕ್ಕಾಗಿ ಕೆಲಸ ಮಾಡಿದ ಮಹಾತ್ಮರು ಮಾತ್ರ ಸ್ಮರಣೀಯರಾಗಿ ಉಳಿಯುತ್ತಾರೆ ಎಂಬುದಕ್ಕೆ ಸಿದ್ದೇಶ್ವರ ಶ್ರೀಗಳು ಸಾಕ್ಷಿಯಾಗಿದ್ದಾರೆ ಎಂದರು.

ರಾಮ, ಕೃಷ್ಣ, ಬಸವಣ್ಣ ಸೇರಿದಂತೆ ಇನ್ನೂ ಅನೇಕರನ್ನು ನಾವು ಜಾತಿ ಆಧಾರದಿಂದ ನೋಡಿಲ್ಲ. ಅವರ ಗುಣಗಳಿಂದಾಗಿ ಅವರು ಎಲ್ಲರಿಗೂ ದೇವರಾಗಿದ್ದಾರೆ. ಅವರ ಹಾದಿಯಲ್ಲೇ ಸಿದ್ದೇಶ್ವರ ಶ್ರೀಗಳು ಕೂಡಾ ನಮ್ಮೆಲ್ಲರಿಗೂ ದೇವರಾಗಿದ್ದಾರೆ ಎಂದರು.

ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ಕೊಡುವ ವಿಚಾರದಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ಅವರು ಬಹಳ ಎಚ್ಚರಿಕೆಯ ಹೆಜ್ಜೆ ಇಡುತ್ತಿದ್ದಾರೆ. ನ್ಯಾಯಾಂಗ ತೀರ್ಮಾನವು ನಮ್ಮ ಪರವಾಗಿ ಬರುವ ವಿಶ್ವಾಸವಿದ್ದು, ಈ ಸಮಾಜಕ್ಕೆ ಖಂಡಿತವಾಗಿಯೂ ನ್ಯಾಯ ಕೊಟ್ಟೇ ಕೊಡುತ್ತೇವೆ. ನಿಮ್ಮ ಬೆಂಬಲಕ್ಕೆ ಕೇಂದ್ರ ಸರ್ಕಾರವೂ ಇದೆ. ಗಂಗಾರತಿ ಮಾದರಿಯಲ್ಲಿ ಹರಿಹರದ ಬಳಿ ತುಂಗಾರತಿಯ ಶ್ರೀಗಳ ಸಂಕಲ್ಪ ಶೀಘ್ರವೇ ಅನುಷ್ಠಾನಕ್ಕೆ ಬರಲಿದೆ ಎಂದು ಪ್ರಹ್ಲಾದ್ ಜೋಷಿ ಹೇಳಿದರು.

ವಿಜಯಪುರದ ಸ್ಪರ್ಶ ಫೌಂಡೇಶನ್ ಅಧ್ಯಕ್ಷೆ ಶ್ರೀಮತಿ ಸಂಯುಕ್ತಾ ಪಾಟೀಲ್ ಮಾತನಾಡಿ, ಯುವ ಜನಾಂಗದ ಬದುಕಿನ ಯಶಸ್ಸಿಗೆ ಸಿದ್ದೇಶ್ವರ ಶ್ರೀಗಳು ಆಸಕ್ತಿ, ಪರಿಶ್ರಮ, ಏಕಾಗ್ರತೆ ಎಂಬ ಮೌಲ್ಯಗಳನ್ನು ಕೊಟ್ಟಿದ್ದಾರೆ ಎಂದರು.

ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ಮಾತನಾಡಿ, ಸಿದ್ದೇಶ್ವರ ಶ್ರೀಗಳ ಬದುಕೇ ಆದರ್ಶ ವಾಗಿದ್ದು, ಸಿದ್ದೇಶ್ವರ ಶ್ರೀಗಳು ಜ್ಞಾನ ಯೋಗಿಯಾಗಿದ್ದಾರೆ. ತರಳಬಾಳು ಶ್ರೀಗಳು ಜಲಯೋಗಿಯಾಗಿದ್ದಾರೆ. ವಚನಾನಂದ ಶ್ರೀಗಳು ಯೋಗದ ಮೂಲಕ ಜನರಿಗೆ ಯೋಗದ ಯೋಗಿಗಳಾಗಿದ್ದಾರೆ ಎಂದರು.

ಚಿತ್ರನಟ ಡಾಲಿ ಧನಂಜಯ್ ಅವರು ಬಸವಣ್ಣನವರ ವಚನದ ಮೂಲಕ ಮಾತು ಆರಂಭಿಸಿ, ಸಿದ್ಧಗಂಗಾ ಮತ್ತು ಸಿದ್ದೇಶ್ವರ ಶ್ರೀಗಳ ಬದುಕನ್ನು ನೋಡಿರುವ ನಾವೇ ಪುಣ್ಯವಂತರಾಗಿದ್ದೇವೆ. ನುಡಿ ಇದ್ದಂಗೆ ನಡೆ ಇರಬೇಕೆಂದು ಬಸವಣ್ಣ ಹೇಳಿದ್ದರು. ಆ ಮಾತುಗಳನ್ನು ಅಕ್ಷರಶಃ ಪಾಲಿಸಿದ ಶ್ರೀಗಳು ಎಲ್ಲವನ್ನೂ ನಿರಾಕರಿಸಿ ಹೇಗೆ ಬದುಕಬೇಕೆಂದು ತೋರಿಸಿಕೊಟ್ಟಿದ್ದಾರೆ. ಎಲ್ಲವೂ ಇದ್ದಾಗ ಹೇಗೆ ಬದುಕಬೇಕೆಂದು ನಟ ಪುನೀತ್ ರಾಜ್‌ಕುಮಾರ್ ತೋರಿಸಿಕೊಟ್ಟು ಹೋಗಿದ್ದಾರೆ ಎಂದಾಗ ಸಭೆಯಲ್ಲಿ ಜೋರಾದ ಚಪ್ಪಾಳೆ ಕೇಳಿ ಬಂದವು.

ಮಾರ್ಚ್ 30 ಕ್ಕೆ ನನ್ನ ಅಭಿನಯದ 'ಹೊಯ್ಸಳ' ಚಿತ್ರ ಬಿಡುಗಡೆ ಆಗಲಿದ್ದು, ಎಲ್ಲರೂ ಸಿನಿಮಾ ಟಾಕೀಸ್‌ಗೆ ಹೋಗಿ ಸಿನಿಮಾ ನೋಡಿ ಬೆಂಬಲಿಸುವಂತೆ ಮನವಿ ಮಾಡಿದ ಡಾಲಿ ಧನಂಜಯ್ ಅವರು, ಅಭಿಮಾನಿಗಳ ಕೋರಿಕೆ ಮೇರೆಗೆ ಡೈಲಾಗ್ ಹೇಳಿ ಗಮನ ಸೆಳೆದರು.

ರಾಜ್ಯ ಮಾಹಿತಿ ಆಯುಕ್ತ ಎಸ್.ಬಿ. ಬೊಮ್ಮನಹಳ್ಳಿ, ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಸಿ.ಬಿ. ರಿಷ್ಯಂತ್, ಅಥಣಿಯ ವಿಮೋಚನಾ ಸಂಸ್ಥೆಯ ಬಿ.ಎಲ್. ಪಾಟೀಲ್ ಮಾತನಾಡಿದರು.

ರಾಣೇಬೆನ್ನೂರು ಶಾಸಕ ಅರುಣ್‌ಕುಮಾರ್ ಪೂಜಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದ ದಿವ್ಯ ನೇತೃತ್ವ ವಹಿಸಿದ್ದ ಶ್ರೀ ವಚನಾನಂದ ಸ್ವಾಮೀಜಿ ಮಾತನಾಡಿ, ನಾವು 2ನೇ ಕ್ಲಾಸ್ ಇದ್ದಾಗ ನಮ್ಮ ತಾಯಿ ಸಿದ್ದೇಶ್ವರ ಶ್ರೀಗಳ ಪ್ರವಚನಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಆಗ ನಮ್ಮ ತಾಯಿ ನನಗೆ ನೀನು ಸಿದ್ದೇಶ್ವರ ಶ್ರೀಗಳಂತೆ ಆಗು ಎಂದಿದ್ದರು. ಈ ಪೀಠಕ್ಕೆ ನಾವು ಬರುವಾಗಲೂ ಅವರ ಮತ್ತು ಇಳಕಲ್‌ನ ಮಹಾಂತ ಅಪ್ಪಗಳ ಅಭಿಪ್ರಾಯ ಕೇಳಿ ಅವರು ಒಪ್ಪಿದ ಮೇಲೆಯೇ ಇಲ್ಲಿಗೆ ಬಂದಿದ್ದೇವೆ. ಹರ ಜಾತ್ರೆ ಆರಂಭಿಸಲು ಸಿದ್ದೇಶ್ವರ ಶ್ರೀಗಳೇ ಕಾರಣ. ಹಾಗಾಗಿ ಅವರ ಕೈಯಿಂದಲೇ ಹರ ಜಾತ್ರೆಗೆ ಚಾಲನೆ ಕೊಡಿಸಿದ್ದೆವು. ಅಂದಿನಿಂದ ಇಂದಿನವರೆಗೆ ಹರ ಜಾತ್ರೆ ಯಾವ ವಿಘ್ನವೂ ಇಲ್ಲದಂತೆ ನಡೆದುಕೊಂಡು ಬಂದಿದೆ. ವಿದೇಶದಲ್ಲಿ ಸಿದ್ದೇಶ್ವರ ಶ್ರೀಗಳ ಜೊತೆಗೆ ನಮ್ಮ ಯೋಗವನ್ನು ಫಿಕ್ಸ್ ಮಾಡುತ್ತಿದ್ದರು. ಅವರು ನನಗೆ ತಾಯಿಯ ಪ್ರೀತಿ, ಮಮತೆ ತೋರಿಸಿದ್ದರೆಂದು ಭಾವುಕರಾದರು. ಸಿರಿಗೆರೆ ಶ್ರೀಗಳು ನನಗೆ ಆದರ್ಶರಾಗಿದ್ದಾರೆ. ಅವರ ಮಾರ್ಗದರ್ಶನವೂ ನಮಗೆ ಸದಾ ಇರಲಿದೆ ಎಂದರು.

ಪುನೀತ್ ರಾಜ್‌ಕುಮಾರ್ ನಂತರ ಬಹಳ ವಿಶೇಷ ಹಾಗೂ ಮಾನವೀಯ ಗುಣಗಳನ್ನು ಹೊಂದಿರುವ ನಟನಾಗಿ ಡಾಲಿ ಧನಂಜಯ ಬೆಳೆಯುತ್ತಿದ್ದಾರೆ. ಸಿದ್ದೇಶ್ವರ ಶ್ರೀಗಳು ಲಿಂಗೈಕ್ಯರಾದಾಗ ನಟರ ಪೈಕಿ ಅಲ್ಲಿಗೆ ಬಂದವರು ಧನಂಜಯ ಮಾತ್ರ. ಆ ಕಾರಣಕ್ಕಾಗಿ ನಾವು ಅವರನ್ನು ಈ ನುಡಿ ನಮನ ಕಾರ್ಯಕ್ರಮಕ್ಕೆ ಕರೆದಿದ್ದೇವೆ ಎಂದು ಸ್ವಾಮೀಜಿ ತಿಳಿಸಿದರು.

ಈ ವೇಳೆ ಕೂಡ್ಲಿಗಿಯ ಬಳ್ಳಾರಿ ಹನುಮಂತ ಅವರು ತಯಾರು ಮಾಡಿಸಿದ 18 ಕೆ.ಜಿ. ಬೆಳ್ಳಿಯ ಪೀಠವನ್ನು ಪೀಠಕ್ಕೆ ಹಸ್ತಾಂತರಿಸಿದರು.

ಕು. ಮಹಾನ್ಯ ಹಾಡಿದ 'ಇಂದು ಬಾನಿಗೆಲ್ಲಾ ಹಬ್ಬ' ಮತ್ತು 'ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು' ಎಂಬ ಹಾಡುಗಳು ಎಲ್ಲರ ಮನ ಸೆಳೆದವು.

ಪಂಚಮಸಾಲಿ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಬಿ. ನಾಗನಗೌಡರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯಾಧ್ಯಕ್ಷ ಸೋಮನಗೌಡ ಪಾಟೀಲ್ ನುಡಿ ನಮನ ಸಲ್ಲಿಸಿದರು.

ಸಮಾಜದ ಮುಖಂಡರಾದ ಬಾವಿ ಬೆಟ್ಟಪ್ಪ, ಶಾಸಕ ಎಸ್. ರಾಮಪ್ಪ, ಬಸವರಾಜ ದಿಂಡೂರು, ಬಿ.ಸಿ. ಉಮಾಪತಿ, ಎಚ್.ಪಿ. ಬಾಬಣ್ಣ, ಸಿರಿಗೆರೆ ನಾಗನಗೌಡ್ರು, ಕಳಕನಗೌಡ ಕಲ್ಲೂರ, ಗುರುಶಾಂತ ಬಿ. ನೋಡೋಣಿ, ಹೆಚ್. ನಾಗರಾಜ್, ಎಸ್.ಎಸ್. ಪಾಟೀಲ್, ಜ್ಯೋತಿ ಪ್ರಕಾಶ್, ವಕೀಲರಾದ ಪ್ರಕಾಶಗೌಡ ಪಾಟೀಲ್, ಚಂದ್ರಶೇಖರ್ ಪೂಜಾರ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಬೆಂಗಳೂರು ಜಿ.ಪಂ. ಮಾಜಿ ಅಧ್ಯಕ್ಷ ಮರಿಸ್ವಾಮಿ ಮತ್ತಿತರರು ವೇದಿಕೆಯಲ್ಲಿದ್ದರು.

ಪಂಚಮಸಾಲಿ ಸಮಾಜದ ಯುವ ಘಟಕದ ರಾಜ್ಯಾಧ್ಯಕ್ಷ ಮಂಜುನಾಥ ನವಲಗುಂದ ಸ್ವಾಗತಿಸಿದರು. ಹರಿಹರದ ಕು. ನಳಿನ ನಿರೂಪಿಸಿದರೆ, ಲಕ್ಷ್ಮೇಶ್ವರದ ಮಂಜುನಾಥ ಮಾಗಡಿ ವಂದಿಸಿದರು.

## ಜಮೀನನ್ನು ವಶಕ್ಕೆ ಪಡೆಯಬೇಡಿ

**(1ನೇ ಪುಟದಿಂದ)** ಇರಬೇಕು. ರೈತ ಭೂಮಿಯ ಖಾಯಂ ಒಡೆಯನಾಗಿರಬೇಕು. ಕೈಗಾರಿಕೆ ಮಾಡುವವರು ಆ ರೈತನಿಗೆ ಪ್ರತಿ ತಿಂಗಳು ಇಂತಿಷ್ಟು ಹಣ ನೀಡುವಂತಾಗಬೇಕು. ಆ ಮೂಲಕ ರೈತರಿಗಾಗಿ ದೇಶದಲ್ಲಿ ಹೊಸ ಕಾನೂನು ಜಾರಿಗೊಳಿಸಬೇಕೆಂದು ಸಿರಿಗೆರೆ ಸ್ವಾಮೀಜಿ ಆಗ್ರಹಿಸಿದರು.

# ಜೋಶಿಮಠದಲ್ಲಿ ವಾಲಿಕೊಂಡ ಇನ್ನೆರಡು ಹೋಟೆಲ್

ಜೋಶಿಮಠ, ಜ. 15 – ಉತ್ತರಾಖಂಡದ ಜೋಶಿಮಠದಲ್ಲಿ ಇನ್ನೆರಡು ಹೋಟೆಲ್‌ಗಳು ಅಪಾಯಕಾರಿಯಾಗಿ ವಾಲಿಕೊಂಡಿವೆ. ಔಲಿ ರೋಪ್‌ವೇ ಬಳಿ ಅಪಾಯಕಾರಿ ಬಿರುಕು ಕಂಡು ಬಂದಿದೆ.

ಜೆ.ಪಿ. ಕಾಲೋನಿಯಲ್ಲಿ ಭೂಗತ ಕಾಲುವೆ ಸಿಡಿದಿದ್ದು, ಅದರಿಂದ ಹೊರ ಬರುತ್ತಿರುವ ನೀರಿನ ಪ್ರಮಾಣ ಹೆಚ್ಚಾಗಿದೆ. ಜನವರಿ 2ರಿಂದ ಕೆಸರು ನೀರು ಈ ಜಾಗದಿಂದ ಹೊರ ಬರುತ್ತಿದೆ. ಆದರೆ, ನೀರಿನ ಮೂಲ ಇನ್ನೂ ಪತ್ತೆಯಾಗಿಲ್ಲ.

ಈ ಹಿಂದೆ ಮಲರಿ ಇನ್ ಹಾಗೂ ಮೌಂಟೇ ವ್ಯೂ ಹೋಟೆಲ್‌ಗಳು ವಾಲಿಕೊಂಡಿದ್ದವು. ಇವುಗಳನ್ನು ಅಸುರಕ್ಷಿತ ಎಂದು ಘೋಷಿಸಿ ಅವುಗಳನ್ನು ಧ್ವಂಸಗೊಳಿಸುವ ಕಾರ್ಯ ಆರಂಭಿಸಲಾಗಿತ್ತು. ಈ ನಡುವೆಯೇ ಸ್ನೌ ಕ್ರೆಸ್ಟ್ ಹಾಗೂ ಕಾಮೆಟ್ ಹೋಟೆಲ್‌ಗಳು ವಾಲಿಕೊಂಡು ತಗಲುವ ಮಟ್ಟಕ್ಕೆ ಬಂದಿವೆ. ಈ ಹೋಟೆಲ್‌ಗಳನ್ನು ಮುನ್ನೆಚ್ಚರಿಕೆ ಕ್ರಮವಾಗಿ ಖಾಲಿ ಮಾಡಿಸಲಾಗಿದೆ.

ಜೋಶಿಮಠ – ಔಲಿ ರೋಪ್‌ವೇ ಬಳಿ ಬಿರುಕು ಇನ್ನಷ್ಟು ಅಗಲವಾಗಿದೆ. ವಾರದ ಹಿಂದೆ ರೋಪ್‌ವೇ ಕಾರ್ಯನಿರ್ವಹಣೆ ನಿಲ್ಲಿಸಲಾಗಿತ್ತು.

4.5 ಕಿಮೀ. ರೋಪ್‌ವೇ ಏಷಿಯಾದ ಅತಿ ದೊಡ್ಡ ರೋಪ್‌ವೇಗಳಲ್ಲಿ ಒಂದಾಗಿದೆ. ಇದರ ಮೂಲಕ ಜೋಶಿಮಠವನ್ನು ಔಲಿಗೆ ಸಂಪರ್ಕಿಸಲಾಗುತ್ತದೆ.

# ನಗರದಲ್ಲಿ ಇಂದು ವರುಷದ ಸಂಭ್ರಮ

ಜಿಲ್ಲಾ ಶಿಶು ಕಲ್ಯಾಣ ಮಂಡಳಿ, 'ಪ್ರೇಮಾಲಯ' ನಿರ್ಗತಿಕ ಹೆಣ್ಣು ಮಕ್ಕಳ ಕುಟೀರ, 'ಸಾಹಸ' ಸಿ. ಕೇಶವಮೂರ್ತಿ ಕಿವುಡ ಮತ್ತು ಮೂಕ ಮಕ್ಕಳ ವಾಕ್ ತರಬೇತಿ ಕೇಂದ್ರ, 'ವಿಮೋಚನಾ' ಸಿ.ಕೆ. ವೃತ್ತಿ ತರಬೇತಿ ಕೇಂದ್ರ (ಕಿವುಡ, ಮೂಕ ಹೆಣ್ಣು ಮಕ್ಕಳಿಗಾಗಿ)ದ ಸಂಯುಕ್ತಾಶ್ರಯದಲ್ಲಿ ಇಂದು ಸಂಜೆ 5 ಕ್ಕೆ ವನಿತಾ ಸಮಾಜದ ಆವರಣದಲ್ಲಿನ ಸತ್ಯಸಾಯಿ ರಂಗಮಂದಿರದಲ್ಲಿ ವರುಷದ ಸಂಭ್ರಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕಿ ವಾಸಂತಿ ಉಪ್ಪಾರ್ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದು, ಲಲಿತ ಇಂಟರ್ ನ್ಯಾಷನಲ್ ಸ್ಕೂಲ್ ಅಧ್ಯಕ್ಷೆ ಇ.ಆರ್. ಶಶಿಕಲಾ ಬಹುಮಾನ ವಿತರಣೆ ಮಾಡಲಿದ್ದಾರೆ.

ಮಾಜಿ ಸಚಿವೆ ಡಾ. ಸಿ. ನಾಗಮ್ಮ ಕೇಶವಮೂರ್ತಿ ಮತ್ತಿತರರು ಉಪಸ್ಥಿತರಿರುವರು. ಜಿಲ್ಲಾ ಶಿಶು ಕಲ್ಯಾಣ ಮಂಡಳಿ ಅಧ್ಯಕ್ಷೆ ಎ.ಆರ್. ಉಷಾ ರಂಗನಾಥ್ ಉಪಸ್ಥಿತರಿರುವರು.

# ಮಹಿಳೆಯರಿಗೆ ಸಂಗೀತ ಸ್ಪರ್ಧೆ

ದಾವಣಗೆರೆ, ಜ. 15- ಬ್ರಾಹ್ಮಣ ಸಮಾಜ ಮಹಿಳಾ ವಿಭಾಗದ ಆಶ್ರಯದಲ್ಲಿ ಇದೇ ದಿನಾಂಕ 29 ರ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಶ್ರೀ ತ್ಯಾಗರಾಜರ ಹಾಗೂ ಶ್ರೀ ಪುರಂದರದಾಸರ ಆರಾಧನೆಯ ಅಂಗವಾಗಿ 18 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಸಂಗೀತ ಸ್ಪರ್ಧೆಯನ್ನು ನಗರದ ವರ್ತುಲ ರಸ್ತೆಯಲ್ಲಿರುವ ಶ್ರೀ ಶಂಕರ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ.

ಶ್ರೀ ತ್ಯಾಗರಾಜರ ಕೀರ್ತನೆಗೆ ಏಳು ನಿಮಿಷ, ಶ್ರೀ ಪುರಂದರ ದಾಸರ ದೇವರ ನಾಮಕ್ಕೆ ಐದು ನಿಮಿಷ ಕಾಲಾವಕಾಶ ನೀಡಲಾಗಿದೆ. ಶೃತಿ ಹೊರತುಪಡಿಸಿ ಬೇರೆ ಯಾವುದಕ್ಕೂ ಅವಕಾಶವಿಲ್ಲ.

ಹೆಸರು ನೋಂದಾಯಿಸಲು ಇದೇ ದಿನಾಂಕ 27 ಕೊನೆಯ ದಿನವಾಗಿರುತ್ತದೆ. ಮಾಹಿತಿಗಾಗಿ 988605 8866,9964027146 ಈ ಮೊಬೈಲ್ ಗಳಿಗೆ ಸಂಪರ್ಕಿಸುವಂತೆ ಶ್ರೀಮತಿ ಅಡಿಗ ಕೋರಿದ್ದಾರೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಎಸ್ ಲೇಔಟ್ 'ಎ' ಬ್ಲಾಕ್, ಕುವೆಂಪು ನಗರ, ಎಮ್.ಸಿ.ಸಿ 'ಬಿ' ಬ್ಲಾಕ್, ಸಿದ್ದವೀರಪ್ಪ ಬಡಾವಣೆ, ಶಾಮನೂರು ರೋಡ್, ಬಿಐಇಟಿ ರೋಡ್, ಗ್ಲಾಸ್ ಹೌಸ್, ಬಾಪೂಜಿ ಸಮುದಾಯ ಭವನ, ಅಂಗವಿಕಲರ ಶಾಲೆ, ಲಕ್ಷ್ಮಿ ಫ್ಲೋರ್ ಮಿಲ್, ಎಸ್.ಎನ್ ಲೇಔಟ್, ಜಿ.ಎಚ್. ಪಾರ್ಕ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

ಎಸ್.ಎಸ್. ಲೇಔಟ್ 'ಎ' ಬ್ಲಾಕ್ ಮತ್ತು 'ಬಿ' ಬ್ಲಾಕ್ ಬಸವೇಶ್ವರ ಬಡಾವಣೆ, ಶಾಂತಿನಗರ, ಮಹಾಲಕ್ಷ್ಮಿ ಲೇಔಟ್, ಬಾಲಾಜಿ ನಗರ, ನಿಜಲಿಂಗಪ್ಪ ಲೇಔಟ್, ನೌಕರರ ಸಮುದಾಯ ಭವನ, ಅಥಣಿ ಕಾಲೇಜ್, ಎಮ್‌ಬಿಎ ಕಾಲೇಜ್, ಆಫೀಸರ್ ಕ್ಲಬ್, ಕುಂದವಾಡ ಕೆರೆ ನೀರು ಸರಬರಾಜು ಘಟಕ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಶಕ್ತಿನಗರ, ಬನಶಂಕರಿ ಬಡಾವಣೆ, ಡಿಸಿಎಂ ಟೌನ್‌ಶಿಪ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ನಿಜಲಿಂಗಪ್ಪ ಬಡಾವಣೆ, ರಿಂಗ್ ರೋಡ್, ಕುಂದವಾಡ ರಸ್ತೆ, ಯಲ್ಲಮ್ಮ ನಗರ, ವಿನೋಬನಗರ 4ನೇ ಮೇನ್, 3ನೇ ಮೇನ್ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಲಿಂಗದಹಳ್ಳಿ : ಸ್ಪಟಿಕ, ಪಚ್ಚೆ ಲಿಂಗಗಳ ಪ್ರತಿಷ್ಠಾಪನೆ



ರಾಣೇಬೆನ್ನೂರು, ಜ. 15- ಸ್ಪಟಿಕ ಲಿಂಗ ಹಾಗೂ ಪಚ್ಚೆ ಲಿಂಗಗಳ ಪ್ರಾಣ ಪ್ರತಿಷ್ಠಾಪನೆ, ಕಾಶಿ ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಪೀಠಾಧಿಪತಿ ಶ್ರೀ ವೀರಭದ್ರ ಸ್ವಾಮಿಗಳ ಪೀಠಾಧಿ ಕಾರದ ರಜತ ಮಹೋತ್ಸವದ ಸಮಾರಂಭವು ತಾಲ್ಲೂಕಿನ ಲಿಂಗದಹಳ್ಳಿ ಹಿರೇಮಠದಲ್ಲಿ ಎರಡು ದಿನಗಳ ಕಾಲ ವಿಜ್ರುಂಭಣೆಯಿಂದ ಜರುಗಲಿದೆ ಎಂದು ವೀರಭದ್ರ ಶ್ರೀಗಳು ತಿಳಿಸಿದ್ದಾರೆ.

ಮಠದಲ್ಲಿನ ಕಳ್ಳತನವಾದ 8 ನೇ ಶತಮಾನದ ಸ್ಪಟಿಕ ಲಿಂಗ ಇದುವರೆಗೂ ಪತ್ತೆಯಾಗದಿದ್ದರಿಂದ ಭಕ್ತರ ಅಪೇಕ್ಷೆಯಂತೆ ಸುಮಾರು ಒಂದು ಕೋಟಿ ರೂ.ಗೂ ಅಧಿಕ ವೆಚ್ಚದಲ್ಲಿ ಏಷಿಯಾ ಖಂಡದಲ್ಲಿಯೇ ದೊಡ್ಡದಾದ 1.5 ಅಡಿ ಎತ್ತರ 10 ಇಂಚು ಅಗಲದ ಸ್ಪಟಿಕ ಲಿಂಗ ಹಾಗೂ 4 ಪಚ್ಚೆ ಲಿಂಗ ಪ್ರತಿಷ್ಠಾಪಿಸಲಾಗಿದ್ದು, ಪ್ರಾಣ ಪ್ರತಿಷ್ಠಾಪನೆ ಇದೇ ದಿನಾಂಕ 23 ರಂದು ನಡೆಯಲಿದೆ.

ಕೊಟ್ಟೂರಿನ ಧಾರ್ಮಿಕ ಸಮಾರಂಭದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಮಠದಲ್ಲಿ ಕಳ್ಳತನವಾಗಿತ್ತು. ಅಂದಿನಿಂದ ನಮಗೆ ಹಾಗೂ ನಮ್ಮ ಭಕ್ತರಿಗೆ ನೆಮ್ಮದಿ ಇಲ್ಲದಂತಾಗಿತ್ತು. ನೌಕರಿಯಿಂದ ಬರುವ ವೇತನ, ಭಕ್ತರು ನೀಡಿದ ದೇಣಿಗೆ, ನಮ್ಮ ಇನ್ಸೂರೆನ್ಸ್ ಮೇಲೆ ಬ್ಯಾಂಕ್ ಹಾಗೂ ಹೆಸ್ಕಾಂ ಸಹಕಾರಿ ಸಂಘದಲ್ಲಿ ಸಾಲ ತೆಗೆಸಿ ಸ್ಪಟಿಕ ಲಿಂಗ ತರಿಸಲಾಗಿದೆ. ರಕ್ಷಣೆಗೆ ಸಿಸಿ ಕ್ಯಾಮೆರಾ ಹಾಗೂ ಸೇಫ್ ಲಾಕರ್ ಅಳವಡಿಸಲಾಗಿದೆ ಎಂದು ಶ್ರೀಗಳು ಹೇಳಿದರು.

ತೊಗರ್ಸಿ ಮಹಾಂತ ದೇಶಿ ಕೇಂದ್ರ ಶ್ರೀಗಳು, ಗೋಣಿಬೀಡು ಸಿದ್ಧಲಿಂಗ ಶ್ರೀಗಳು, ಕವಲೇದುರ್ಗ ಮರುಳಸಿದ್ಧ ಶ್ರೀಗಳು, ರಟ್ಟಿಹಳ್ಳಿ ಶಿವಲಿಂಗ ಶ್ರೀಗಳು, ದಿಂಡದಹಳ್ಳಿ ಪಶುಪತಿ ಶ್ರೀಗಳು, ಮಣಕೂರ ಮಲ್ಲಿಕಾರ್ಜುನ ಶ್ರೀಗಳು, ನರಸಾಪುರದ ಶಿವಕುಮಾರ ಶ್ರೀಗಳು ಪಾಲ್ಗೊಳ್ಳಲಿದ್ದಾರೆ.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ, ಶಾಸಕರಾದ ಅರುಣಕುಮಾರ್ ಪೂಜಾರ್, ಆರ್. ಶಂಕರ್, ಎಸ್. ರಾಮಪ್ಪ, ಮಾಜಿ ಸಭಾಪತಿ ಕೆ.ಬಿ. ಕೋಳಿವಾಡ, ಸಾರಿಗೆ ಸಂಸ್ಥೆ ಉಪಾಧ್ಯಕ್ಷ ಡಾ. ಬಸವರಾಜ ಕೇಲಗಾರ, ನಿರ್ದೇಶಕ ಸಂತೋಷ ಪಾಟೀಲ, ಸಚಿವರು, ಜನಪ್ರತಿನಿಧಿಗಳು ಭಾಗವಹಿಸುವರು. ಇದೇ ದಿನಾಂಕ 22 ರಂದು ಧಾರ್ಮಿಕ ವಿಧಿ ವಿಧಾನಗಳು ನಡೆಯಲಿವೆ ಎಂದು ಶ್ರೀಗಳು ವಿವರಿಸಿದರು.

# ನೇಪಾಳದ ವಿಮಾನ ಪತನದಲ್ಲಿ 68 ಸಾವು



ಕಠ್ಮಂಡು, ಜ. 15 – 72 ಜನರಿದ್ದ ನೇಪಾಳದ ವಿಮಾನ ಪತನಗೊಂಡಿದ್ದು, 68 ಜನ ಸಾವನ್ನಪ್ಪಿದ್ದಾರೆ. ಈ ವಿಮಾನದಲ್ಲಿ ಭಾರತದ ಐವರು ಪ್ರಯಾಣಿಸುತ್ತಿದ್ದರು.

ಪೋಖರಾ ನಗರದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ವಿಮಾನ ನಿಲ್ದಾಣದಲ್ಲಿ ಯೇತಿ ಏರ್‌ಲೈನ್ಸ್‌ನ ವಿಮಾನ ಇಳಿಯುವಾಗ ಹಳ್ಳಕ್ಕೆ ಉರುಳಿದೆ. ನೇಪಾಳದಲ್ಲಿ ವಿಮಾನ ಅಪಘಾತಗಳು ಅಪರೂಪವಲ್ಲ. ಆದರೆ, ಎ.ಟಿ. ಆರ್. ಮಾದರಿಯ ವಿಮಾನದ ಅಪಘಾತ ದೇಶದಲ್ಲಿ ಇದೇ ಮೊದಲು.

ಬೆಳಿಗ್ಗೆ 10.33ರ ಸಮಯದಲ್ಲಿ ಹಳೆಯ ಹಾಗೂ ಹೊಸ ವಿಮಾನ ನಿಲ್ದಾಣಗಳ ನಡುವೆ ಇರುವ ಸೇತಿ ನದಿ ದಂಡೆಯಲ್ಲಿ ವಿಮಾನ ಪತನಗೊಂಡಿದೆ. ವಿಮಾನದಲ್ಲಿ 68 ಪ್ರಯಾಣಿಕರು ಹಾಗೂ ನಾಲ್ವರು ಸಿಬ್ಬಂದಿ ಇದ್ದರು. ಇದುವರೆಗೂ 68 ಮೃತದೇಹಗಳನ್ನು ಪತ್ತೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಮಾನದಲ್ಲಿ ಐವರು ಭಾರತೀಯರು, ನಾಲ್ವರು ರಷ್ಯನ್ನರು, ಇಬ್ಬರು ಕೊರಿಯನ್ನರು ಮತ್ತು ಆಸ್ಟ್ರೇಲಿಯಾ, ಫ್ರಾನ್ಸ್, ಅರ್ಜೆಂಟಿನಾ ಹಾಗೂ ಇಸ್ರೇಲ್‌ನ ತಲಾ ಒಬ್ಬರಿದ್ದರು. ಇದರಲ್ಲಿದ್ದ ಭಾರತೀಯರನ್ನು ಅಭಿಷೇಕ್ ಕುಶ್ವಾಹಾ, ಬಿಶಾಲ್ ಶರ್ಮ, ಅನಿಲ್ ಕುಮಾರ್ ರಾಜಭರ್, ಸೋನಿ ಜೈಸ್ವಾಲ್ ಹಾಗೂ ಸಂಜಯ ಜೈಸ್ವಾಲ್ ಎಂದು ಗುರುತಿಸಲಾಗಿದೆ.

ವಿಮಾನ ಪತನ ಸ್ಥಳದಲ್ಲಿ ಯಾರೂ ಜೀವಂತವಾಗಿರುವ ಮಾಹಿತಿ ಸಿಕ್ಕಿಲ್ಲ ಎಂದು ಯೇತಿ ಏರ್‌ಲೈನ್ಸ್ ವಕ್ತಾರರಾದ ಸುದರ್ಶನ್ ಭರ್ತೌಲ ಹೇಳಿದ್ದಾರೆ. ಪೋಖರಾ ನಗರದಲ್ಲಿ ಹವಾಮಾನ ಉತ್ತಮವಾಗಿತ್ತು. ವಿಮಾನದ ಇಂಜಿನ್‌ಗಳೂ ಸಹ ಉತ್ತಮ ಸ್ಥಿತಿಯಲ್ಲಿದ್ದವು. ವಿಮಾನಕ್ಕೆ ಏನಾಯಿತು ಎಂಬುದು ಗೊತ್ತಿಲ್ಲ ಎಂದವರು ಹೇಳಿದ್ದಾರೆ.

ವಿಮಾನದಲ್ಲಿದ್ದ ಉಳಿದ ನಾಲ್ವರ ಶೋಧ ಕಾರ್ಯ ನಡೆದಿದೆ.

ವಿಮಾನ ಇಳಿಯುವಾಗ ಅಗಲವಾದ ತಿರುವು ಪಡೆದುಕೊಂಡಿದೆ. ಇದು ಅಪಘಾತಕ್ಕೆ ಕಾರಣವಾಗಿರಬಹುದು ಎಂದು ಕೆಲ ಸ್ಥಳೀಯರು ಹೇಳಿದ್ದಾರೆ. ಎರಡು ವಾರಗಳ ಹಿಂದಷ್ಟೇ ನೂತನ ವಿಮಾನ ನಿಲ್ದಾಣ ಉದ್ಘಾಟಿಸಲಾಗಿತ್ತು.

ವಿಮಾನ ಪತನಗೊಂಡ ಸ್ಥಳ ಅತ್ಯಂತ ಕಡಿದಾಗಿರುವ ಕಾರಣ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಕಾಗಿದೆ. ಸಾವಿರಾರು ಜನ ಸ್ಥಳದಲ್ಲಿ ಸೇರಿಕೊಂಡಿದ್ದೂ ಸಹ ಸಮಸ್ಯೆ ಹೆಚ್ಚಿಸಿದೆ.

ನೇಪಾಳದಲ್ಲಿ ಹವಾಮಾನ ಹಠಾತ್ತನೆ ಬದಲಾಗುತ್ತದೆ ಹಾಗೂ ಬೆಟ್ಟಗಳ ಮೇಲಿರುವ ಅಲ್ಲಿನ ಏರ್‌ಸ್ಟ್ರಿಪ್‌ಗಳು ಕಠಿಣವಾಗಿವೆ. ಹೀಗಾಗಿ ಆ ದೇಶದಲ್ಲಿ ವಿಮಾನ ಅಪಘಾತಗಳು ಅಪರೂಪವೇನಲ್ಲ.

ಕಳೆದ ಮೇ 29ರಂದು ನಡೆದ ವಿಮಾನ ಅಪಘಾತದಲ್ಲಿ 22 ಜನ ಸಾವನ್ನಪ್ಪಿದ್ದರು. 2016ರಲ್ಲಿ ಸಂಭವಿಸಿದ ಮತ್ತೊಂದು ಅಪಘಾತದಲ್ಲಿ ವಿಮಾನದಲ್ಲಿದ್ದ ಎಲ್ಲಾ 23 ಜನ ಸಾವನ್ನಪ್ಪಿದ್ದರು. 2018ರ ಮಾರ್ಚ್‌ನಲ್ಲಿ ಅಮೆರಿಕ – ಬಾಂಗ್ಲಾ ಏರ್ ವಿಮಾನ ಪತನವಾಗಿ 51 ಜನ ಸಾವನ್ನಪ್ಪಿದ್ದರು.


# ಜಿಗಳಿಯಲ್ಲಿ ಶ್ರೀ ಗುರು ಸಿದ್ದರಾಮೇಶ್ವರ 850ನೇ ಸುವರ್ಣ ಜಯಂತಿ



ಮಲೇಬೆನ್ನೂರು, ಜ. 15 - ಜಿಗಳಿ ಗ್ರಾ.ಪಂ. ಕಛೇರಿಯಲ್ಲಿ ಶ್ರೀ ಗುರು ಸಿದ್ದರಾಮೇಶ್ವರರ 850ನೇ ಸುವರ್ಣ ಜಯಂತಿಯನ್ನು ಶನಿವಾರ ಸಂಭ್ರಮದಿಂದ ಆಚರಿಸಲಾಯಿತು.

ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಕೆ. ಮಹೇಶ್ವರಪ್ಪ ಬಿ.ಎಂ. ದೇವೇಂದ್ರಪ್ಪ ಎಂ.ವಿ. ನಾಗರಾಜ್ ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ, ಗ್ರಾ.ಪಂ. ಉಪಾಧ್ಯಕ್ಷ ಕೆ.ಜಿ. ಬಸವರಾಜ್, ಸ.ಹಿ.ಪ್ರಾ. ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷ ಎಂ.ಆರ್. ನಾಗರಾಜ್, ಗ್ರಾಮದ ಮುಖಂಡ ರಾದ ಜಿ.ಆರ್. ಹಾಲೇಶ್ ಕುಮಾರ್, ಪೂಜಾರ್ ನಾಗರಾಜ್, ಜಿ.ಪಿ. ಹನುಮಗೌಡ, ಬಿ. ಸೋಮ ಶೇಖರಚಾರಿ, ಜಿ.ಎಂ. ಪ್ರಕಾಶ್, ಹೆಚ್.ರುದ್ರಗೌಡ, ಟಿ.ಮಧು, ಕೊಕ್ಕ ನೂರು ಪ್ರಕಾಶ್, ಹೆಚ್. ವಿಜಯ ಕುಮಾರ್, ಸಿದ್ದೇಶ್ ಬೇವಿನ ಹಳ್ಳಿ ನಾಗರಾಜ್, ಮಲ್ಲನಗೌಡ, ಪ್ರತಾಪ್, ಜಿ.ಬೇವಿನಹಳ್ಳಿಯ ಸೋಮಶೇಖರ್ ಪತ್ರಕರ್ತ ಪ್ರಕಾಶ್, ಪಿಡಿಓ ಉಮೇಶ್, ದ್ವಿತೀಯ ದರ್ಜೆ ಸಹಾಯಕ ಬಿ.ಮೌನೇಶ್, ಸಿಬ್ಬಂದಿಗಳಾದ ಪ್ರಕಾಶ್, ಬಸವರಾಜಯ್ಯ ಸೇರಿದಂತೆ, ಇನ್ನೂ ಅನೇಕರು ಭಾಗವಹಿಸಿದ್ದರು.

# ರಿಮೋಟ್ ಮತದಾನ : ಇಂದು ಆಯೋಗದಿಂದ ಪ್ರಾತ್ಯಕ್ಷಿಕೆ




ನವದೆಹಲಿ, ಜ. 15 – ವಲಸೆ ಕಾರ್ಮಿಕರು ದೂರದ ಪ್ರದೇಶಗಳಿಂದ ಮತದಾನ ಮಾಡಲು ನೆರವಾಗುವ ರಿಮೋಟ್ ಮತಯಂತ್ರಗಳ ಪ್ರಾತ್ಯಕ್ಷಿಕೆ ಯನ್ನು ಚುನಾವಣಾ ಆಯೋಗ ಸೋಮವಾರ ನಡೆಸಿಕೊಡಲಿದೆ.

ಪ್ರಾತ್ಯಕ್ಷಿಕೆಯಲ್ಲಿ ಪಾಲ್ಗೊಳ್ಳುವಂತೆ ಎಂಟು ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷಗಳು ಹಾಗೂ 57 ಪ್ರಾಂತೀಯ ಪಕ್ಷಗಳಿಗೆ ಆಹ್ವಾನ ನೀಡಲಾಗಿದೆ. ವಲಸೆ ಕಾರ್ಮಿಕರು ತಾವಿರುವ ಸ್ಥಳದಿಂದಲೇ ಮತದಾನ ಮಾಡಲು ನೆರವಾಗುವ ವ್ಯವಸ್ಥೆಯ ಕುರಿತ ಚರ್ಚೆಗಾಗಿ ಪಕ್ಷಗಳನ್ನು ಆಹ್ವಾನಿಸಲಾಗಿದೆ.

ಈ ಪ್ರಾತ್ಯಕ್ಷಿಕೆ ವೇಳೆ ಚುನಾವಣಾ ಆಯೋಗದ ತಾಂತ್ರಿಕ ಪರಿಣಿತರೂ ಉಪಸ್ಥಿತರಿರಲಿದ್ದಾರೆ. ಪ್ರಸ್ತಾಪಿತ ಮತದಾನ ಪದ್ಧತಿಯ ಬಗ್ಗೆ ರಾಜಕೀಯ ಪಕ್ಷಗಳು ಜನವರಿ ಅಂತ್ಯದೊಳಗೆ ತಮ್ಮ ನಿಲುವು ತಿಳಿಸುವಂತೆ ಕೇಳಲಾಗಿದೆ.

ವಲಸೆ ಕಾರ್ಮಿಕರು ದೂರದ ಪ್ರದೇಶಕ್ಕೆ ತೆರಳಿರುವ ಕಾರಣ, ಚುನಾವಣಾ ವೇಳೆ ತಮ್ಮ ನೆಲೆಗಳಿಗೆ ವಾಪಸ್ಸಾಗಿ ಮತದಾನ ಮಾಡುವಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

## ಸಂಪತ್‌ಕುಮಾರ್ ಬೆಳಗಾವಿ ನಿಧನ



ಮೂಲತಃ ದಾವಣಗೆರೆಯವರಾದ, ಹಾಲಿ ಬೆಂಗಳೂರು ನಿವಾಸಿಯಾಗಿದ್ದ **ಶ್ರೀ ಸಂಪತ್‌ಕುಮಾರ್ ಬೆಳಗಾವಿ** ಅವರು ದಿನಾಂಕ 15-01-2023ರ ಭಾನುವಾರ ಬೆಳಿಗ್ಗೆ 9.40 ಕ್ಕೆ ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 78 ವರ್ಷ ವಯಸ್ಸಾಗಿತ್ತು. ಧರ್ಮಪತ್ನಿ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16-01-2023ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಹರಿಶ್ಚಂದ್ರ ಘಾಟ್‌ನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಡಾ. ಬಿ. ಬಕ್ಕಪ್ಪ ಮತ್ತು ಬೆಳಗಾವಿ ಬಂಧುಗಳು-ಮಿತ್ರರು.**
**ಮೊ. : 97312 97079, 99643 91715, 81973 15761**

## ಕಕ್ಕರಗೊಳ್ಳದ ಪಾರ್ವತಮ್ಮ ನಿಧನ



ದಾವಣಗೆರೆ ಕಕ್ಕರಗೊಳ್ಳ ಗ್ರಾಮದ ವಾಸಿ ನಾಗರಾಜಪ್ಪ ಮಾಗೋಡು ಇವರ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮ (65) ಇವರು ದಿನಾಂಕ 15.1.2023ರ ಭಾನುವಾರ ಸಂಜೆ 7.35ಕ್ಕೆ ನಿಧನರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 16.1.2023ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಕಕ್ಕರಗೊಳ್ಳ ಗ್ರಾಮದಲ್ಲಿ ನೆರವೇರಲಿದೆ.

# ಸಿದ್ದರಾಮೇಶ್ವರರ ಜಯಂತಿಗೆ ಅಧಿಕಾರಿಗಳು ಗೈರು; ಶಾಸಕ ರಾಮಪ್ಪ ಆಕ್ಷೇಪ



ಹರಿಹರ, ಜ. 15 - ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಶ್ರೀ ಸಿದ್ದರಾಮೇಶ್ವರ ಶಿವಯೋಗಿಗಳ ಜಯಂತಿ ಆಚರಣೆಯಲ್ಲಿ ತಾಲ್ಲೂಕು ಆಡಳಿತದ ಅಧಿಕಾರಿಗಳು ಭಾಗವಹಿಸದ ಕಾರಣ ಶಾಸಕ ಎಸ್. ರಾಮಪ್ಪ ಅಸಮಾಧಾನ ವ್ಯಕ್ತಪಡಿಸಿದ ಘಟನೆ ನಡೆಯಿತು.

ತಾಲ್ಲೂಕು ಆಡಳಿತ ಸಿದ್ದರಾಮೇಶ್ವರರ ಜಯಂತಿ ಆಚರಿಸಲು ಸರ್ಕಾರ ಸೂಚನೆ ನೀಡಿದೆ. ಆದರೆ ಅವರು ಹಿಂದುಳಿದ ವರ್ಗದವರು ಎಂದು ತಾಲ್ಲೂಕು ಆಡಳಿತದ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ ಎಂದು ರಾಮಪ್ಪ ಆಕ್ಷೇಪಿಸಿದರು.

ಈ ಬಗ್ಗೆ ಜಿಲ್ಲೆಯ ಹಿರಿಯ ಅಧಿಕಾರಿಗಳಿಗೆ ದೂರವಾಣಿ ಮೂಲಕ ತಿಳಿಸಿದ್ದೇನೆ. ತಾಲ್ಲೂಕು ಆಡಳಿತದ ಅಧಿಕಾರಿಗಳು ಮುಂದೆ ಯಾವುದೇ ದಾರ್ಶನಿಕರ ಜಯಂತಿ ನಿರ್ಲಕ್ಷಿಸಿದರೆ ಈ ವಿಷಯ ವಿಧಾನಸಭೆಯಲ್ಲಿ ಪ್ರಸ್ತಾಪಿಸುತ್ತೇನೆ ಎಂದವರು ಹೇಳಿದರು.

ಹರಿಹರ

ಈ ಸಂದರ್ಭದಲ್ಲಿ ಮಾಜಿ ಶಾಸಕ ಬಿ.ಪಿ. ಹರೀಶ್, ತಾಲ್ಲೂಕು ಭೋವಿ ಜನಾಂಗದ ಅಧ್ಯಕ್ಷ ಆದಾಪುರ ವೀರಭದ್ರಪ್ಪ, ಮಲೇಬೆನ್ನೂರು ಪುರಸಭೆ ಮಾಜಿ ಅಧ್ಯಕ್ಷೆ ಅಂಜಿನಮ್ಮ ವಿಜಯಕುಮಾರ್, ಯುವರಾಜ್ ಹೆಚ್.ಡಿ. ಎಂ.ಕೆ. ಸ್ವಾಮಿ, ಬ್ಯಾಂಕ್ ರಾಮಣ್ಣ, ದಿನೇಶ್, ಮಂಜಪ್ಪ ಎಸ್.ಹೆಚ್. ರಾಜೇಶ್ ವಿಜಯಕುಮಾರ್ ಮಲೇಬೆನ್ನೂರು ಹೆಚ್. ಬಿ. ರುದ್ರೇಗೌಡ ಮತ್ತಿತರರು ಹಾಜರಿದ್ದರು.

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಸೋಮವಾರ, ಜನವರಿ 16, 2023


## ತೃಪ್ತಿ ಕಲಿಯದೇ ಶಾಂತಿ ಇಲ್ಲ

### ಸಿದ್ದಗಂಗಾ ಶಾಲೆಯ ವಾರ್ಷಿಕ ಸಂಭ್ರಮದಲ್ಲಿ ಸಂತೋಷ್ ಹೆಗಡೆ




ದಾವಣಗೆರೆ, ಜ. 15 – ಆಟಂ ಬಾಂಬ್ ಮಾಡುವುದು ಹೇಗೆ ಎಂಬುದನ್ನು ಕಲಿಸಿ ಕೊಡುತ್ತಿರುವ ಶಿಕ್ಷಣ, ಆಟಂ ಬಾಂಬ್ ಬಳಕೆಯ ಬಗ್ಗೆ ಎಚ್ಚರಿಕೆ ವಹಿಸುವ ಕುರಿತ ನೈತಿಕತೆಯನ್ನು ಕಲಿಸುತ್ತಿಲ್ಲ ಎಂದು ನಿವೃತ್ತ ಲೋಕಾಯುಕ್ತ ನ್ಯಾಯ ಮೂರ್ತಿ ಎನ್. ಸಂತೋಷ್ ಹೆಗಡೆ ವಿಷಾದಿಸಿದ್ದಾರೆ.

ನಗರದ ಸಿದ್ದಗಂಗಾ ಪದವಿ ಪೂರ್ವ ವಿಜ್ಞಾನ ಕಾಲೇಜು, ಸಿದ್ದಗಂಗಾ ಕಾಂಪೋಜಿಟ್ ಹೈಸ್ಕೂಲ್, ಸಿದ್ದಗಂಗಾ ಸ್ಕೂಲ್ ಹಾಗೂ ಎಂ.ಎಸ್.ಎಸ್. ಪ್ರಾಥಮಿಕ ಶಾಲೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ 53ನೇ ವಾರ್ಷಿಕ ಸಂಭ್ರಮ – 2023 ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಮುಂದಿನ ಪೀಳಿಗೆಗೆ ಭೌತಿಕ ಶ್ರೀಮಂತಿಕೆಗಿಂತ ಮೌಲ್ಯಗಳ ಶಿಕ್ಷಣ ಬೇಕಿದೆ. ನೈತಿಕ ತಳಹದಿ ಬೇಕಿದೆ. ಸಂತೃಪ್ತಿ ಹಾಗೂ ಮಾನವೀಯತೆ ಬೇಕಿವೆ. ಆದರೆ, ಸಮಾಜ ಆ ಮೌಲ್ಯಗಳನ್ನು ಕಲಿಸುತ್ತಿಲ್ಲ ಎಂದವರು ಹೇಳಿದರು. ಶಾಸಕಾಂಗ, (4ನೇ ಪುಟಕ್ಕೆ)

#### ಸ್ವಂತ ಮನೆ ಇಲ್ಲ, 'ಸಂತೋಷ' ಇದೆ

ನನಗೆ ಈಗ 83 ವರ್ಷ ವಯಸ್ಸಾಗಿದೆ. ಈಗಲೂ ನನಗೆ ಸ್ವಂತ ಮನೆ ಇಲ್ಲ. ನಾನು ಫ್ಲಾಟ್‌ನಲ್ಲಿದ್ದೇನೆ. ಆದರೆ, ಸಂತೋಷ ಇದೆ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗಡೆ ಹೇಳಿದರು. ತೃಪ್ತಿ ಹಾಗೂ ಮಾನವೀಯತೆಯ ಗುಣ ಇದ್ದಾಗ ಮಾತ್ರ ಸಂತೋಷ ಸಿಗಲು ಸಾಧ್ಯ. ಹಣ ಹಾಗೂ ಅಧಿಕಾರದಿಂದ ಸಂತೋಷ ಪಡೆ ಯಲು ಸಾಧ್ಯವಾಗದು ಎಂದವರು ತಿಳಿಸಿದರು.

## ಲಂಕಾ ವಿರುದ್ಧ ಭಾರತಕ್ಕೆ ದಾಖಲೆಯ ಗೆಲುವು



ತಿರುವನಂತಪುರಂ, ಜ. 15 – ಶ್ರೀಲಂಕಾ ವಿರುದ್ಧದ ಏಕದಿನ ಸರಣಿಯ ಮೂರನೇ ಪಂದ್ಯದಲ್ಲಿ ಭಾರತ 317 ರನ್‌ಗಳ ದಾಖಲೆ ಜಯ ಸಾಧಿಸಿದೆ. ಇದರೊಂದಿಗೆ ಸರಣಿ 3-0 ಅಂತರದಿಂದ ಭಾರತದ ಪಾಲಾಗಿದೆ. ವಿರಾಟ್ ಕೊಹ್ಲಿ ಅವರು ಅಜೇಯ 166 ರನ್ ಸಿಡಿಸಿದರು. ಶುಭಂ ಗಿಲ್ ಅವರು 116 ಮತ್ತು ನಾಯಕ ರೋಹಿತ್ ಶರ್ಮ 42 ರನ್ ಗಳಿಸಿದರು. ಇದರೊಂದಿಗೆ ಭಾರತ ಐದು ವಿಕೆಟ್ ನಷ್ಟಕ್ಕೆ 390 ರನ್ ಗಳಿಸಿತು. ಗೆಲ್ಲಲು ಭಾರೀ ಮೊತ್ತ ಬೆನ್ನತ್ತಿದ ಶ್ರೀಲಂಕ, 22 ಓವರ್‌ಗಳಲ್ಲಿ ಕೇವಲ 73 ರನ್‌ಗಳಿಗೆ ಎಲ್ಲಾ ವಿಕೆಟ್ ಕಳೆದುಕೊಂಡಿತು. ಭಾರತದ ಪರವಾಗಿ ಮೊಹಮ್ಮದ್ ಸಿರಾಜ್ ಅವರು 32 ರನ್ ನೀಡಿ ನಾಲ್ಕು ವಿಕೆಟ್ ಉರುಳಿಸಿದರು. ಏಕದಿನ ಪಂದ್ಯಾವಳಿಯಲ್ಲಿ ಇಷ್ಟು ದೊಡ್ಡ ಮೊತ್ತದ ಜಯ ದಾಖಲಾಗಿರುವುದು ಇದೇ ಮೊದಲು.

# ತಾಳ್ಮೆಯಿಂದ ಮೀಸಲಾತಿ ಪಡೆಯಿರಿ: ಎಸ್ಸೆಸ್

### ಹರಜಾತ್ರೆ: ಪ್ರಾಣ ಬಿಡುವ ಮಾತುಗಳನ್ನಾಡದಂತೆ ಸ್ವಾಮೀಜಿಗಳಿಗೆ ಶಿವಶಂಕರಪ್ಪ ಮನವಿ

ಎಂ. ಚಿದಾನಂದ ಕಂಚಿಕೇರಿ

ಹರಿಹರ, ಜ. 15- ಪ್ರಾಣ ಬಿಟ್ಟೇವು ಮೀಸಲಾತಿ ಬಿಡುವುದಿಲ್ಲ ಎಂಬ ಮಾತುಗಳನ್ನು ಆಡುವ ಬದಲು ತಾಳ್ಮೆಯಿಂದ ಮೀಸಲಾತಿ ಪಡೆಯಬೇಕು ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ನಗರದ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ನಡೆಯುತ್ತಿರುವ ಹರಜಾತ್ರಾ ಮಹೋತ್ಸವದಲ್ಲಿ ಪಂಚಮ ಸಾಲಿ ಗುರುಪೀಠಾಧ್ಯಕ್ಷರಾದ ಶ್ರೀ ವಚನಾನಂದ ಮಹಾ ಸ್ವಾಮಿಗಳ ಪಂಚಮ ಪೀಠಾರೋಹಣ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ವೀರಶೈವ ಸಮಾಜದ ಒಳಪಂಗಡಗಳಷ್ಟೇ ಅಲ್ಲದೇ ಇತರೆ ಹಿಂದುಳಿದ ವರ್ಗಗಳ ಸಮುದಾಯದವರು ಮೀಸಲಾತಿ ಹೆಚ್ಚಳಕ್ಕಾಗಿ ಹೋರಾಟ ಮಾಡುತ್ತಿವೆ. ಸರ್ಕಾರ ಈ ವಿಷಯದಲ್ಲಿ ಮಲಗಿಲ್ಲ. ಸಾಧಕ – ಬಾಧಕಗಳ ಬಗ್ಗೆ ಗಮನ ಹರಿಸುತ್ತಿದೆ ಎಂದರು.

ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಯಾವುದೇ ಸರ್ಕಾರ ಇದ್ದರೂ ಎಲ್ಲಾ ಸಮುದಾಯಗಳಿಗೆ ನ್ಯಾಯ ಒದಗಿಸುವುದರ ಬಗ್ಗೆ ಯೋಚನೆ ಮಾಡುತ್ತವೆ. ಈ ಬಗ್ಗೆ ನಮ್ಮಲ್ಲಿ ಪ್ರಯತ್ನ ಹಾಗೂ ನಂಬಿಕೆ ಇರಬೇಕು ಎಂದರು.

ಕೇಂದ್ರ ಸರ್ಕಾರದಿಂದ ವೀರಶೈವ ಲಿಂಗಾಯತರಿಗೆ ಒ.ಬಿ.ಸಿ. ಸೌಲಭ್ಯಗಳು ದೊರೆಯಬೇಕಿದೆ. ಇದಕ್ಕಾಗಿ ಮಹಾಸಭಾ ಒತ್ತಾಯ ಮಾಡಲಿದೆ. 2ಎ ಮೀಸಲಾತಿ ಹೆಚ್ಚಳಕ್ಕೆ ಬೆಂಬಲ ನೀಡಲಿದೆ ಎಂದವರು ಹೇಳಿದರು.

ಪಂಚಮಸಾಲಿ ಸಮಾಜದ ಮುಖಂಡರು ಒಬ್ಬರು ಒಂದೊಂದು ರೀತಿ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು. ಇದ ರಿಂದ ಸಮಾಜ ಹರಿದು ಹೋಗುತ್ತದೆ ಎಂದವರು ಎಚ್ಚರಿಸಿದರು.

ಪಂಚಮಸಾಲಿ ಗುರುಪೀಠಾಧ್ಯಕ್ಷ ಶ್ರೀ ವಚನಾನಂದ ಮಹಾಸ್ವಾಮೀಜಿ ಮಾತನಾಡಿ, ಮೀಸಲಾತಿಯ ನಿರ್ಣಾಯಕ ಹಂತದಲ್ಲಿ ನಾವು ಇದ್ದೇವೆ. ಪ್ರಾಣ ಬಿಟ್ಟೇವು, ಆದರೆ ಮೀಸ ಲಾತಿ ಬಿಡೆವು ಎಂದು ಮಾತಿಗೆ ಬದ್ಧವಾಗಿರುವೆ ಎಂದರು.

ಮೀಸಲಾತಿ ಸಿಗುವವರೆಗೆ ನಮಗೆ ನೀಡಿರುವ ಬೆಳ್ಳಿ ಸಿಂಹಾಸನವನ್ನು ಏರುವುದಿಲ್ಲ ಮತ್ತು ತುಲಾ ಭಾರವನ್ನು ಸ್ವೀಕರಿಸುವುದಿಲ್ಲ. ಮೀಸಲಾತಿ ಸಿಕ್ಕ ದಿನದಂದು ಪೀಠಾರೋಹಣದಲ್ಲಿ ತೃಪ್ತಿಯನ್ನು ಕಾಣುವುದಾಗಿ ಹೇಳಿದರು.

ಪ್ರಾಸ್ತಾವಿಕವಾಗಿ ಹರ ಜಾತ್ರಾ ಮಹೋತ್ಸವ ಸಮಿತಿಯ ಅಧ್ಯಕ್ಷರಾದ ಪ್ರಕಾಶ್ ಪಾಟೀಲ್ ಮಾತನಾಡಿದರು.

ಈ ವೇಳೆ ಪುಟಾಣಿ ಕನ್ನಡದ ಗಾನ (4ನೇ ಪುಟಕ್ಕೆ)



## ಕಾವಿಧಾರಿಗಳಿಗಿಂತ ಹೆಚ್ಚಿನ ಗೌರವ ಸಿದ್ದೇಶ್ವರ ಶ್ರೀಗಿತ್ತು

### 'ಜ್ಞಾನಯೋಗಿಗೆ ನುಡಿ ನಮನ' ಕಾರ್ಯಕ್ರಮದಲ್ಲಿ ತರಳಬಾಳು ಜಗದ್ಗುರುಗಳು ಅಭಿಮತ

ಜಿಗಳಿ ಪ್ರಕಾಶ್

ಮಲೇಬೆನ್ನೂರು, ಜ.15- ಭವ್ಯ ವ್ಯಕ್ತಿತ್ವ, ಸರಳ ಜೀವನ ಮಾರ್ಗದೊಂದಿಗೆ ದಿವ್ಯ ಸಂದೇಶ ನೀಡುತ್ತಿದ್ದ ಸಿದ್ದೇಶ್ವರ ಶ್ರೀಗಳು ಕಾವಿಧಾರಿಗಳಾಗಿರಲಿಲ್ಲ, ಆದರೂ ಅವರಿಗೆ ಸಮಾಜದಲ್ಲಿ ಹೆಚ್ಚಿನ ಗೌರವವಿತ್ತು. ಜನರಿಗೆ ಅವರು ಹಾಗೂ ಅವರ ಪ್ರವಚನ ಎಂದರೆ ಪಂಚಪ್ರಾಣವಾಗಿತ್ತು ಎಂದು ಸಿರಿಗೆರೆಯ ತರಳಬಾಳು ಬೃಹನ್ಮಠದ ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅವರು ಭಾನುವಾರ ಹರಿಹರದ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಹಮ್ಮಿ ಕೊಂಡಿದ್ದ ಹರಜಾತ್ರೆಯ 2ನೇ ದಿನ ಬೆಳಿಗ್ಗೆ ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಶ್ರೀಗಳವರಿಗೆ ನುಡಿ ನಮನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಈ ಶತಮಾನದ ಮಹಾಸಂತರಾಗಿ ಎಲ್ಲಾ ಜನರ ಉತ್ತಮ ಬದುಕಿಗಾಗಿ ಬದುಕಿದ ಸಿದ್ದೇಶ್ವರ ಶ್ರೀಗಳು 2014 ರಲ್ಲೇ ವಿಲ್ ಬರೆದು ನಾವು ನಿಧನರಾದ ಮೇಲೆ ನನ್ನನ್ನು ಮಣ್ಣು ಮಾಡಬೇಡಿ, ಅಗ್ನಿಸ್ಪರ್ಶ ಮಾಡಿ, ನನ್ನ ಸ್ಮಾರಕ ನಿರ್ಮಿಸಬೇಡಿ ಎಂದು ಹೇಳಿದ್ದರು. ಅವರ ಆಶಯದಂತೆ ಎಲ್ಲಾ ನಡೆದಿದೆ. ಜಗತ್ತಿನಲ್ಲೇ ಈ ರೀತಿ ವಿಲ್ ಬರೆದ ವ್ಯಕ್ತಿ ಸಿದ್ದೇಶ್ವರ ಶ್ರೀಗಳಾಗಿದ್ದಾರೆ. ಶರಣರ ಧರ್ಮದಲ್ಲಿ ಅಗ್ನಿಸ್ಪರ್ಶ ಮಾಡು ವುದಿಲ್ಲ. ಈ ತಾತ್ವಿಕ ನಿಲುವು ಗೊತ್ತಿದ್ದರೂ ಸಹ ಅವರು ಅದರಿಂದ ನಿರ್ಲಿಪ್ತರಾಗಲು ಬಯಸಿ ತಮ್ಮ ಶರೀರವನ್ನು ಅಗ್ನಿಸ್ಪರ್ಶ ಮಾಡುವಂತೆ ಸೂಚಿಸಿದ್ದರು ಎಂದರು.

ರೈತರ ಬಗ್ಗೆ ತುಂಬಾ ಕಾಳಜಿ ಹೊಂದಿದ್ದ ಶ್ರೀಗಳು ಎಂ.ಬಿ. ಪಾಟೀಲ್ ಅವರು ನೀರಾವರಿ ಸಚಿವರಾಗಿದ್ದಾಗ ವಿಜಯಪುರ ಜಿಲ್ಲೆಯಲ್ಲಿ ಸಾಕಷ್ಟು ನೀರಾವರಿ ಯೋಜನೆಗಳ ಜೊತೆಗೆ ಅವರ ಹುಟ್ಟೂರಾದ ತ್ರಿಕೋಟಾ (2ನೇ ಪುಟಕ್ಕೆ)

#### ರೈತರ ಜಮೀನನ್ನು ವಶಕ್ಕೆ ಪಡೆಯಬೇಡಿ : ಸಿರಿಗೆರೆ ಶ್ರೀ

ಕೈಗಾರಿಕೆ ಸೇರಿದಂತೆ ಹಲವಾರು ಯೋಜನೆಗಳಿಗೆ ಸರ್ಕಾರ ರೈತರ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುತ್ತಿದೆ, ರೈತ ದೇಶದ ಬೆನ್ನೆಲುಬು. ನಾವು ರೈತರ ಜಮೀನನ್ನು ಕಸಿದುಕೊಂಡು ಬಂಡವಾಳ ಶಾಹಿಗಳಿಗೆ ಕೊಟ್ಟರೆ ರೈತರ ಬೆನ್ನನ್ನು ಮುರಿದಂತಾಗುತ್ತದೆ ಎಂದು ಸಿರಿಗೆರೆ ಶ್ರೀಗಳು ಕಳವಳ ವ್ಯಕ್ತಪಡಿಸಿದರು.

ಕೈಗಾರಿಕೆಗಳು ಬೇಕು ನಿಜ. ಆದರೆ ನೀವು ರೈತರ ಜಮೀನನ್ನು ಸರ್ಕಾರದ ವಶಕ್ಕೆ ಪಡೆದು ನಂತರ ಕೈಗಾರಿಕೆಗಳಿಗೆ ನೀಡಿದರೆ ರೈತರಿಗೆ ತೊಂದರೆ ಆಗುತ್ತದೆ. ಆದ್ದರಿಂದ ವಿದೇಶಗಳಲ್ಲಿ ಜಾರಿಯಲ್ಲಿರುವಂತೆ ರೈತರ ಭೂಮಿ ರೈತನ ಹೆಸರಿನಲ್ಲಿಯೇ (2ನೇ ಪುಟಕ್ಕೆ)



# 8 ಸಾವಿರ ಜನರಿಂದ ಯೋಗ ಪ್ರದರ್ಶನ

### ಗಿನ್ನಿಸ್ ದಾಖಲೆಯ ಯೋಗಥಾನ್‌ಗೆ ದೇವನಗರಿ ಸಾಥ್

ದಾವಣಗೆರೆ, ಜ. 15- ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಮುಂಜಾನೆ ಗಿನ್ನಿಸ್ ದಾಖಲೆ ಗುರಿಯ ಯೋಗಥಾನ್‌ನಲ್ಲಿ ಸುಮಾರು 8 ಸಾವಿರಕ್ಕೂ ಅಧಿಕ ಜನರು ಯೋಗ ಪ್ರದರ್ಶನ ನೀಡಿದರು.

ಬೆಳಿಗ್ಗೆ 6 ಗಂಟೆಯಿಂದಲೇ ಯೋಗ ಪ್ರದ ರ್ಶನಕ್ಕೆ ಪ್ರವೇಶ ಆರಂಭವಾಗಿತ್ತು. ಮೈ ಕೊರೆವ ಚಳಿ ನಡುವೆಯೂ ವಿವಿಧ ಶಾಲಾ-ಕಾಲೇಜು ಗಳಿಂದ ಮಕ್ಕಳು ಸೂರ್ಯೋದಯಕ್ಕೂ ಮುನ್ನವೇ ಕ್ರೀಡಾಂಗಣದತ್ತ ದಾಂಗುಡಿ ಇಟ್ಟಿದ್ದರು.

ಸಮಾಜ ಕಲ್ಯಾಣ ಇಲಾಖೆಯಿಂದ ಹಸಿರು ಹಾಸಿನ ವ್ಯವಸ್ಥೆ ಮಾಡಲಾಗಿತ್ತು. ಕೆಲವರು ತಮ್ಮದೇ ಆದ ಯೋಗ ಮ್ಯಾಟ್ ತಂದಿದ್ದರು. ಮತ್ತೆ ಕೆಲವರು ಹಸಿರು ಹಾಸಿನ ಮೇಲೆಯೇ ಯೋಗ ಮಾಡಿದರು. ಪುಟಾಣಿ ಮಕ್ಕಳು, ಶಾಲಾ -ಕಾಲೇಜು ವಿದ್ಯಾರ್ಥಿಗಳು, ಯುವಕ-ಯುವತಿ ಯರು, ಶಿಕ್ಷಕ-ಶಿಕ್ಷಕಿಯರು, ವಿವಿಧ ಇಲಾಖೆ ಅಧಿಕಾರಿಗಳು, ಪುರುಷರು, ಗೃಹಿಣಿಯರೂ ಸೇರಿದಂತೆ ಕೆಲ ವೃದ್ಧರೂ ಸಹ ಅತ್ಯುತ್ಸಾಹದಿಂದ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು.

ನಾಡಗೀತೆಯೊಂದಿಗೆ ಆರಂಭವಾದ ಪ್ರದರ್ಶನದಲ್ಲಿ 40 ನಿಮಿಷಗಳಲ್ಲಿ 33 ವಿವಿಧ ರೀತಿಯ ಆಸನಗಳನ್ನು ಮಾಡಲಾಯಿತು. ಧ್ವನಿ ಮುದ್ರಿತ ಯೋಗ ಮಾರ್ಗದರ್ಶಕರ ಸೂಚನೆಯಲ್ಲಿ ಹಿನ್ನೆಲೆ ಸಂಗೀತದ ಅಬ್ಬರವೇ ಜೋರಾಗಿ, ಸೂಚನೆ ಅಸ್ಪಷ್ಟವಾಗಿದ್ದರೂ ವೇದಿಕೆ ಮೇಲಿದ್ದವರ ಮಾರ್ಗದರ್ಶನದಲ್ಲಿ ಯೋಗ ಪ್ರದರ್ಶನ ಯಶಸ್ವಿಯಾಯಿತು. ಕೊನೆಯಲ್ಲಿ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಅಂತ್ಯಗೊಳಿಸಲಾಯಿತು.

ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಅವರ ನೇತೃತ್ವದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ, ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಜಿಲ್ಲಾ ಪಂಚಾಯ್ತಿ ಸಿಇಒ ಡಾ.ಚೆನ್ನಪ್ಪ, ಎಸ್ಪಿ ಸಿ.ಬಿ. ರಿಷ್ಯಂತ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಶಂಕರಗೌಡ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಸುಚೇತಾ ಎಂ.ನೆಲವಿಗಿ, ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್ ವೇದಿಕೆ ಮೇಲೆ ಯೋಗ ಪ್ರದರ್ಶನ ಮಾಡಿದರು. ಹಿರಿಯ (4ನೇ ಪುಟಕ್ಕೆ)

#### ವಿಶ್ವದಾಖಲೆ ಬರೆದ ಯೋಗಥಾನ್

ಬೆಂಗಳೂರು, ಜ. 15 - ರಾಷ್ಟ್ರೀಯ ಯುವ ದಿನದ ಅಂಗವಾಗಿ ರಾಜ್ಯಾದ್ಯಂತ ನಡೆದ ಯೋಗಥಾನ್ ಗಿನ್ನೀಸ್ ದಾಖಲೆ ಸೇರುವ ಪ್ರಯತ್ನದಲ್ಲಿ ಯಶಸ್ಸು ಕಂಡಿದೆ.

ರಾಜ್ಯಾದ್ಯಂತ ಲಕ್ಷಾಂತರ ಜನರು ಏಕ ಕಾಲದಲ್ಲಿ ಯೋಗಾಸನ ನಡೆಸಿದ್ದರು. 2018 ರಲ್ಲಿ ರಾಜಸ್ಥಾನದಲ್ಲಿ ಏಕಕಾಲಕ್ಕೆ 1.60 ಲಕ್ಷ ಜನರು ಯೋಗ ಮಾಡಿದ್ದು ದಾಖಲೆಯಾಗಿತ್ತು.

ಭಾನುವಾರ ಬೆಳಗ್ಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣ ಗೌಡ ಅವರು ಯೋಗಥಾನ್ ಉದ್ಘಾಟಿಸಿದ್ದರು. ಈ ಕಾರ್ಯಕ್ರಮದಲ್ಲಿ ಏಕಕಕಾಲಕ್ಕೆ 6 ಲಕ್ಷಕ್ಕೂ ಹೆಚ್ಚು ಜನ ಯೋಗಾಸನ ಮಾಡಿದ್ದಾರೆ. ಯೋಗಥಾನ್ ವಿಶ್ವದಾಖಲೆ ಸೃಷ್ಟಿಸಿದೆ ಎಂದು ಸಚಿವ ನಾರಾಯಣಗೌಡ ಹೇಳಿದ್ದಾರೆ.







**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 40x60 South, 40x60 North, 50x80 North, 80 ಅಡಿ ರೋಡ್‌ಗಿದೆ. 40x60 East, 40x60 West, 30x40, 30x40 West ಅಕ್ಕ-ಪಕ್ಕ, Rate : 2000 ರಿಂದ 2500 ರವರೆಗೆ
ಐನಳ್ಳಿ ಚನ್ನಬಸಪ್ಪ, ಏಜೆಂಟ್
**99166 12110**

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ ಯುರೋ ಸ್ಕೂಲ್ ಹತ್ತಿರ, 35x60 ಉತ್ತರ-ಪೂರ್ವ ಕಾರ್ನರ್, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ 30x47 ಪಶ್ಚಿಮ, 20x60 ಪೂರ್ವ. ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಪಶ್ಚಿಮ, 30x50 ಪಶ್ಚಿಮ
ಸ್ವಾಮಿ ಏಜೆಂಟ್ ವಿದ್ಯಾನಗರ
**97421 44715**

**ಮಳಿಗೆ ಮತ್ತು ಗೋಡೌನ್ (ಅಟ್ಯಾಚ್) ಬಾಡಿಗೆಗೆ**
ವಿದ್ಯಾರ್ಥಿ ಭವನ ಹತ್ತಿರ ಕೆಇಬಿ ಆಫೀಸ್ ಎದುರು, ದಾವಣಗೆರೆ.
**91418 75151**

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ ರೋಡ್‌ಗೆ ಹತ್ತಿರ ಶನೇಶ್ವರ ದೇವಸ್ಥಾನ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ 30x40 , 30x40 East ಅಕ್ಕ-ಪಕ್ಕ, 30x40, 30x40 West ಅಕ್ಕ-ಪಕ್ಕ. 60x40 East. Rate : 1850 ರಿಂದ 1950 ರವರೆಗೆ
ಐನಳ್ಳಿ ಚನ್ನಬಸಪ್ಪ, ಏಜೆಂಟ್
**99166 12110**

**ಬೇಕಾಗಿದ್ದಾರೆ**
ಸೇಲ್ಸ್ ಮನ್ ಹಾಗೂ ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
ಸಂಪರ್ಕಿಸಿ : ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
**94482 33326, 78991 35660**

**Wanted Receptionist**
E-mail correspondence with fluency in English for Telecalling, Wanted Female Candidates with knowledge of PowerPoint Presentation.
Contact : **93530-55008**

**ಹೋಟೆಲ್ ಸಾಮಾನುಗಳು ಮಾರಾಟಕ್ಕಿವೆ**
Hotel items for Sale.
**90603 81807**

**ಬಿಲ್ಡಿಂಗ್ ಬಾಡಿಗೆಗಿದೆ**
ಹದಡಿ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಉದಯ ಸೂಪರ್ ಮಾರ್ಟ್ ಎದುರಿಗೆ ಸೆಲ್ಲರ್ 3000 ಅಡಿ, ಗ್ರೌಂಡ್ ಫ್ಲೋರ್ 3800 ಅಡಿ, ಮೊದಲನೇ ಮಹಡಿ 1500 ಅಡಿ ಇರುವ ವಾಣಿಜ್ಯ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ.
**96205 95579**

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯ ಬಾರ್ ಅಂಡ್ ಫ್ಯಾಮಿಲಿ ರೆಸ್ಟೋರೆಂಟ್‌ಗೆ ಸಪ್ಲೈಯರ್, ಕ್ಲೀನರ್ ಬೇಕಾಗಿದ್ದಾರೆ. ವಸತಿ, ಊಟ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ.
**81232 20799**

**ಕೆಲಸಕ್ಕೆ ಬೇಕಾಗಿರುತ್ತಾರೆ**
ವಯೋಮಿತಿ 18.35 ವರ್ಷದ ಎಸ್.ಎಸ್.ಎಲ್.ಸಿ. , ಪಿ. ಯು.ಸಿ. ಐಟಿಐ.,
**98445 41894, 96119 66599**

**ಶಕ್ತಿ ಬೋರ್‌ವೆಲ್**
ಮನೆ ಒಳಗೆ ಮತ್ತು ಹೊರಗೆ ಕೊರೆಯುವುದು
300 ರಿಂದ 350 ಅಡಿ, ಬಿಟ್ ಸೈಜ್ 4.5
**99640 78484**
**95906 15776**

**IIT Foundation Maths**
From 5th STD
**Bruit Abacus and Vedic Maths**
Nijalingappa Badavane
**M: 97390 66956**

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳವರು ಬೇಕಾಗಿದ್ದಾರೆ. ಮತ್ತು Pharmacist Certificate ಇರುವವರು (Qualified person) ಬೇಕಾಗಿದ್ದಾರೆ.
**89046 91084**

**House for rent**
**1 Bed room**
**2 bed room**
Car parking, lift, tap water, bore water, fuly furnished.
**Dakshith Iynahalli**
**77955 06795**

**ಡೆಲಿವರಿ ಬಾಯ್ ಬೇಕಾಗಿದ್ದಾರೆ.**
**98860 97065**

**ಸೈಟ್ ಮಾರಾಟಕ್ಕಿದೆ**
30x40 ಅಮರಾವತಿ ಕಾಲೋನಿ, ಹರಿಹರ ಹತ್ತಿರ, ರೈಲ್ವೇ ಗೇಟ್
**6363113327**

**Change of Name**
I, **Parushurama P.N.**(New Name) previously called **Parusharama P.N.**(Old Name), Resident of Parashurampura, Annapurna, Davanagere Tq. & Dist.-577534 have changed my name as **Parushurama P.N.** vide affidavit dated 15-01-2023 sworn before notary M. Prathaparudra, Davanagere. Henceforth all my transactions & dealings will be in my new name **Parushurama P.N.**

**ಡಿಸೈನರ್ ಅಗತ್ಯವಿದೆ**
ಫೋಟೋ ಶಾಪ್ ಮತ್ತು ಕೋರಲ್ ಡ್ರಾದಲ್ಲಿ ಪರಿಣಿತ/ಅನುಭವಿ ಅಭ್ಯರ್ಥಿಗಳ ಅಗತ್ಯವಿದೆ, ಪೂರ್ಣ ಸಮಯ / ಅರೆಕಾಲಿಕ.
ಸಂಪರ್ಕಿಸಿ: ಶಿವವೇದ ಟೆಕ್ ಸೆಂಟರ್
ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
**M : 9632070707**

**SMART CITY CABS DAVANAGERE**
*24x7 Service*
*Etios 4+1 AC.*
Minimum : 4 Km. Rs. - 99/- above per km. Rs. 25/- waiting charges per hour Rs. 100/- 2-4-8-12 hours package. city services & out of stations available.
**08192 255555**
**94811 79933**

**ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ**
ಅಲರ್ಟ್ ಸೆಕ್ಯೂರಿಟಿ ಅಂಡ್ ಡಿಟೆಕ್ಟಿವ್ ಫೋರ್ಸ್
ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಉತ್ತಮ ವೇತನ ಹಾಗೂ ಇಎಸ್‌ಐ ಮತ್ತು ಪಿ.ಎಫ್ ಸೌಲಭ್ಯವಿರುತ್ತದೆ.
ವಿಳಾಸ :
ನಿಟುವಳ್ಳಿ ಮೇನ್ ರೋಡ್, ದಾವಣಗೆರೆ.
**70012 87756, 95351 56531**
**97409 77785**

**ಬಾಡಿಗೆಗೆ ಇದೆ**
ಹನಗವಾಡಿ ಕೈಗಾರಿಕಾ ಪ್ರದೇಶ ಹರಿಹರ. 31x55 ಹೋಂ ಇಂಡಸ್ಟ್ರೀಸ್, 10 HP ಪವರ್ ಬೋರ್‌ವೆಲ್ ನೀರಿನ ಸೌಕರ್ಯವಿದೆ.
**ಫೋ. : 98445 46777**

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
**ಅಸ್ತಮಾ, ಕೀಲು ನೋವು**
ಡಾ।। ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. –ಜಾಹೀರಾತು ವ್ಯವಸ್ಥಾಪಕರು


# ಜಗಳೂರಿನಲ್ಲಿ ಇಂದಿನಿಂದ ಹೊನಲು ಬೆಳಕಿನ ಕಬಡ್ಡಿ



ಜಗಳೂರು, 15- ಶಾಸಕ ಎಸ್.ವಿ.ರಾಮಚಂದ್ರ ಅವರ ಹುಟ್ಟುಹಬ್ಬದ ಅಂಗವಾಗಿ ಎಸ್.ವಿ.ಆರ್ ಅಭಿಮಾನಿ ಬಳಗ ಹಾಗೂ ಕರ್ನಾಟಕ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಸಹಯೋಗದಲ್ಲಿ 'ಸಂಸದ ಜಿ.ಎಂ. ಸಿದ್ದೇಶ್ವರ್ ಕಪ್' ಹೆಸರಿನಡಿ ನಾಳೆ ದಿನಾಂಕ 16, 17, 18ರಂದು ಮೂರು ದಿನಗಳ ಕಾಲ ಹೊನಲು ಬೆಳಕಿನ ಮ್ಯಾಟ್ ಕಬಡ್ಡಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಶಾಸಕ ಎಸ್.ವಿ. ರಾಮಚಂದ್ರ ತಿಳಿಸಿದ್ದಾರೆ.

ಪಟ್ಟಣದ ಬಯಲು ರಂಗಮಂದಿರದ ಆವರಣದಲ್ಲಿ ಕಬಡ್ಡಿ ಕ್ರೀಡಾಂಗಣಸಿದ್ಧತೆವೀಕ್ಷಿಸಿನಂತರಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ರಾಜ್ಯದ 28 ಜಿಲ್ಲೆಗಳಿಂದ 30 ಪುರುಷ ಹಾಗೂ 24 ಮಹಿಳಾ ತಂಡಗಳು ಭಾಗವಹಿಸಲಿದ್ದು, 800 ಕ್ರೀಡಾಪಟುಗಳಿಗೆ ಸಾರಿಗೆ ವೆಚ್ಚ, ಸಮವಸ್ತ್ರ, ನೀಡಲಾಗುವುದು, ಪಟ್ಟಣದ ಹಾಸ್ಟೆಲ್, ಕಲ್ಯಾಣ ಮಂಟಪಗಳಲ್ಲಿ ಊಟ, ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ. 5 ಸಾವಿರ ಪ್ರೇಕ್ಷಕರಿಗೆ ಗ್ಯಾಲರಿಯಲ್ಲಿ ಆಸನದ ವ್ಯವಸ್ಥೆ ಮಾಡಲಾಗಿದೆ ಎಂದರು.

ಕಬಡ್ಡಿ ಅಸೋಸಿಯೇಷನ್‌ನ ಲಕ್ಷ್ಮಣ ಮಾತನಾಡಿ, ಕರ್ನಾಟಕ ಚಾಂಪಿಯನ್ ಶಿಪ್ ನಡೆಸಲಾಗುತ್ತಿದೆ. ಪ್ರತಿನಿತ್ಯ ಬೆಳಿಗ್ಗೆ 9 ರಿಂದ ರಾತ್ರಿ 11 ಗಂಟೆವರೆಗೆ 16 ಪಂದ್ಯಗಳು ನಡೆಯಲಿವೆ. ಲೀಗ್ ಕಮ್ ನಾಕ್‌ಔಟ್ ಪಂದ್ಯಗಳಾಗಿರುತ್ತವೆ. ಪ್ರಥಮ ಸ್ಥಾನಕ್ಕೆ ರೂ. 1,50,000, ದ್ವಿತೀಯ ರೂ. 1,00,000, ತೃತೀಯ ಹಾಗೂ ಚತುರ್ಥ ಸ್ಥಾನ ಪಡೆದ ತಂಡಗಳಿಗೆ ತಲಾ ರೂ. 50,000 ನಗದು ಬಹುಮಾನ ಹಾಗು ಪ್ರಶಸ್ತಿ ವಿತರಿಸಲಾಗುವುದು ಎಂದು ಮಾಹಿತಿ ನೀಡಿದರು.

ಕಬಡ್ಡಿ ಪಂದ್ಯಾವಳಿಗೆ ಪ್ರೋ ಕಬಡ್ಡಿ ಸುಖೇಶ್ ಹೆಗ್ಡೆ, ಬೆಂಗಳೂರು ಬುಲ್ಸ್, ಪ್ರಕಾಶ್ ರೈ, ತುಮಕೂರು ಧನರಾಜ್, ಡಿ.ಸಿ. ರಮೇಶ್ ರಾಕೇಶ್, ಮಲ್ಲಿ, ಹನುಮಂತೇಗೌಡ್ರು, ರಾಜ್ಯ ಮಟ್ಟದ ಕಬಡ್ಡಿ ಆಟಗಾರರು ಭಾಗವಹಿಸಲಿದ್ದಾರೆ ಎಂದರು.

ಬಿಜೆಪಿ ಮಂಡಲ ಅಧ್ಯಕ್ಷ ಮಹೇಶ್ ಪಲ್ಲಾಗಟ್ಟೆ ಮಾತನಾಡಿ, ಬಯಲು ರಂಗಮಂದಿರದ ಆವರಣದಲ್ಲಿ ಶಾಸಕ ಎಸ್.ವಿ.ರಾಮಚಂದ್ರ ಅವರ ಹುಟ್ಟುಹಬ್ಬವನ್ನು ಅಭಿಮಾನಿ ಬಳಗದಿಂದ ಆಚರಿಸಲಾಗುವುದು. ಅಭಿಮಾನಿ ಬಳಗದಿಂದ ಕಬಡ್ಡಿ ಪಂದ್ಯಾವಳಿ ಆಯೋಜಿಸಲಾಗಿದೆ. ಬೆಳಿಗ್ಗೆ 11 ಗಂಟೆಗೆ ಗಂಧರ್ವ ಇವೆಂಟ್ಸ್‌ನಿಂದ ರಸಮಂಜರಿ, ನಂತರ ಸಂಜೆ 4 ಗಂಟೆಗೆ ಕಬಡ್ಡಿ ಪಂದ್ಯಾವಳಿ ಉದ್ಘಾಟನೆ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಪೊಲೀಸ್ ವೃತ್ತ ನಿರೀಕ್ಷಕ ಶ್ರೀನಿವಾಸ್ ಮಾತನಾಡಿ, ಕ್ರೀಡಾಂಗಣ ಹಾಗೂ ಕ್ರೀಡಾಪಟುಗಳಿಗೆ ಸೂಕ್ತ ಭದ್ರತೆಗಾಗಿ ಹೊರಗಡೆಯಿಂದ 60 ಜನ ಪೊಲೀಸ್ ಸಿಬ್ಬಂದಿಗಳನ್ನು ಮತ್ತು ಜಿಲ್ಲಾ ಸಶಸ್ತ್ರ ಮೀಸಲು ಪಡೆ ಸೇರಿದಂತೆ, ಮಹಿಳಾ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಜಿ.ಸಂತೋಷ್ ಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಬಿ.ಮಹೇಶ್ವರಪ್ಪ, ವಿಎಸ್‌ಎಸ್‌ಎನ್ ಅಧ್ಯಕ್ಷ ಬಿಸ್ತುವಳ್ಳಿ ಬಾಬು, ಕಿರಣ್ ಕುಮಾರ್, ವಕೀಲ ಡಿ.ಶ್ರೀನಿವಾಸ್, ಪ.ಪಂ ನಾಮನಿರ್ದೇಶಿತ ಸದಸ್ಯ ಬಿ.ಪಿ.ಸುಭಾನ್, ಮುಖಂಡರಾದ ಹನುಮಂತಪ್ಪ, ಓಬಳೇಶ್, ಮಂಜುನಾಥ್, ಅಣಜಿಗೆರೆ, ಟಿ.ಮಲ್ಲಿಕಾರ್ಜುನ್, ಬಾಲೇನಹಳ್ಳಿ ಕೆಂಚನಗೌಡ, ಪ.ಪಂ ಸದಸ್ಯ ದೇವರಾಜ್, ನಾಗರಾಜ್, ಬಡಪ್ಪ ಸೇರಿದಂತೆ ಇದ್ದರು.




**ದಾವಣಗೆರೆ ನಗರದಲ್ಲಿ ಸಂಕ್ರಾಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು. ಜನರು ಕುಟುಂಬ ಸಹಿತ ಪಾರ್ಕುಗಳಿಗೆ ತೆರಳಿ ವಿವಿಧ ಭಕ್ಷ್ಯಗಳನ್ನು ಸವಿದರು. ಹೊರ ವಲಯದ ಆನಗೋಡು ಉದ್ಯಾನವನ, ಗಾಜಿನಮನೆ, ವಿಶ್ವೇಶ್ವರಯ್ಯ ಉದ್ಯಾನವನ ಸೇರಿದಂತೆ ನಗರದ ಪಾರ್ಕುಗಳು ಭರ್ತಿಯಾಗಿದ್ದವು.**

## 8 ಸಾವಿರ ಜನರಿಂದ ಯೋಗ ಪ್ರದರ್ಶನ

**(3ನೇ ಪುಟದಿಂದ)** ಉದ್ಯಮಿ, ಯೋಗ ಒಕ್ಕೂಟದ ಗೌರವಾಧ್ಯಕ್ಷ ಬಿ.ಸಿ. ಉಮಾಪತಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಂಸದ ಜಿ.ಎಂ. ಸಿದ್ದೇಶ್ವರ ಯೋಗ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ, ಯೋಗ ನಿತ್ಯದ ಯೋಗವಾಗಬೇಕು. ಆಗ ಮಾತ್ರ ಆರೋಗ್ಯ ಉತ್ತಮವಾಗಿಟ್ಟುಕೊಳ್ಳಲು ಸಾಧ್ಯ. ಆಸ್ಪತ್ರೆಗಳಿಗೆ ಹೋಗುವ ಪ್ರಮೇಯಗಳಿಂದ ತಪ್ಪಿಸಿಕೊಳ್ಳಬೇಕಾದರೆ ನಿತ್ಯ ಯೋಗ ಮಾಡಲೇ ಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಮಾತನಾಡುತ್ತಾ, ರಾಷ್ಟ್ರೀಯ ಯೋಗ ದಿನಾ ಚರಣೆಯ ಮುಂದುವರೆದ ಭಾಗವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸೇರಿ 5 ಲಕ್ಷ ಜನರಿಂದ ಯೋಗ ಪ್ರದರ್ಶನ ನಡೆಸಲು ಉದ್ದೇಶಿಸ ಲಾಗಿದ್ದು, ದಾವಣಗೆರೆ ಜಿಲ್ಲೆಗೆ 6 ಸಾವಿರ ಜನರ ಗುರಿ ನೀಡಲಾಗಿತ್ತು. ಗುರಿ ಮೀರಿ ಇಂದು 8 ಸಾವಿರ ಜನರು ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ. ಇಂತಹ ಐತಿಹಾಸಿಕ ಕಾರ್ಯಕ್ರಮದಲ್ಲಿ ನಾವೆಲ್ಲಾ ಭಾಗಿಯಾಗಿ ರುವುದು ಹೆಮ್ಮೆಯ ವಿಚಾರ ಎಂದರು.

## ಪುರಿ ದೇವಾಲಯದಲ್ಲಿ ವಿದೇಶಿಯರಿಗೂ ಪ್ರವೇಶ : ರಾಜ್ಯಪಾಲ ಲಾಲ್ ಸಲಹೆ



ಭುವನೇಶ್ವರ, ಜ. 15 – ಪುರಿ ಜಗನ್ನಾಥ ದೇವಾಲಯದಲ್ಲಿ ವಿದೇಶಿಯರಿಗೂ ಪ್ರವೇಶ ನೀಡಬೇಕು ಎಂದು ಒಡಿಶಾ ರಾಜ್ಯಪಾಲ ಗಣೇಶಿ ಲಾಲ್ ಪ್ರತಿಪಾದಿಸಿದ್ದಾರೆ. ಈ ದೇವಾಲಯದಲ್ಲಿ ವಿದೇಶಿಯರ ಪ್ರವೇಶದ ಮೇಲೆ ಸುದೀರ್ಘ ಕಾಲದಿಂದ ನಿರ್ಬಂಧ ಇದೆ.

ವಿದೇಶಿಯರು ಪುರಿಯ ಗಜಪತಿ ಮಹಾರಾಜಕ್ಕೆ ಭೇಟಿ ನೀಡುತ್ತಾರೆ ಹಾಗೂ ಶಂಕರಾಚಾರ್ಯರನ್ನು ಭೇಟಿ ಮಾಡುತ್ತಾರೆ. ಹೀಗಿರುವಾಗ ಜಗನ್ನಾಥ ದೇವರ ದರ್ಶನಕ್ಕೆ ನಿರ್ಬಂಧಿಸುವುದರಲ್ಲಿ ಅರ್ಥವಿಲ್ಲ ಎಂದವರು ಹೇಳಿದ್ದಾರೆ.

ಪುರಿ ಜಗನ್ನಾಥ ದೇವಾಲಯಕ್ಕೆ ಹಿಂದೂಯೇತರರೂ ಪ್ರವೇಶಿಸುವಂತಿಲ್ಲ. ಈ ಬಗ್ಗೆ ದೇವಾಲಯದ ಹೊರಗೆ ಫಲಕವನ್ನು ಹಾಕಲಾಗಿದೆ.

ರಾಜ್ಯಪಾಲರ ಸಲಹೆಗೆ ಪ್ರತಿಕ್ರಿಯಿಸಿರುವ ಮಾಜಿ ಸಚಿವ ಬಿಜಯ್ ಮೊಹಾಪಾತ್ರ, ಶತಮಾನಗಳ ಸಂಪ್ರದಾಯವನ್ನು ಬದಲಿಸಬಾರದು ಎಂದಿದ್ದಾರೆ.

ವರ್ಷಕ್ಕೆ ಒಂದು ಬಾರಿ ನಡೆಯುವ ರಥಯಾತ್ರೆಯ ವೇಳೆ ಎಲ್ಲರೂ ದರ್ಶನ ಪಡೆಯಲು ಅವಕಾಶವಿದೆ. ಹೀಗಾಗಿ ಈ ವಿಷಯದಲ್ಲಿ ಯಾವುದೇ ವಿವಾದ ಬೇಡ ಎಂದು ಬಿಜೆಪಿ ನಾಯಕ ಮೊಹಾಪಾತ್ರ ಹೇಳಿದ್ದಾರೆ.

ಕಾಂಗ್ರೆಸ್ ಹಿರಿಯ ಶಾಸಕ ಸುರೇಶ್ ರೌತ್ರೆ ಸಹ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದು, ಧಾರ್ಮಿಕ ಪದ್ಧತಿಗಳಲ್ಲಿ ಮಧ್ಯ ಪ್ರವೇಶಿಸಬಾರದು ಎಂದಿದ್ದಾರೆ.

ಈ ಬಗ್ಗೆ ಸ್ಪಷ್ಟನೆ ನೀಡಿರುವ ರಾಜಭವನದ ವಕ್ತಾರರು, ರಾಜ್ಯಪಾಲರು ಕೇವಲ ಸಲಹೆ ನೀಡಿದ್ದಾರೆ. ಇದರಾಚೆಗೆ ಬೇರೇನೂ ಇಲ್ಲ. ಅವರೇನೂ ಯಾವುದೇ ಆದೇಶ ಹೊರಡಿಸಿಲ್ಲ ಎಂದಿದ್ದಾರೆ.

ರಾಜ್ಯಪಾಲರ ನಿಲುವನ್ನು ಬೆಂಬಲಿಸಿರುವ ಒಡಿಶಾದ ಮಾಜಿ ಸಚಿವ ದಾಮೋದರ್ ರಾವತ್, ದೇವರ ದರ್ಶನಕ್ಕೆ ಎಲ್ಲರಿಗೂ ಅವಕಾಶ ಇರಬೇಕು. ಜಗನ್ನಾಥ ಜಗದ ಒಡೆಯ ಎಂದಿದ್ದಾರೆ.




## ತಾಳ್ಮೆಯಿಂದ ಮೀಸಲಾತಿ ಪಡೆಯಿರಿ

**(3ನೇ ಪುಟದಿಂದ)** ಕೋಗಿಲೆ ಮಹಾನ್ಯಾ ಅವರ ಕಾಂತಾರ, ಶಿಶುನಾಳ ಶರೀಫ ಚಲನಚಿತ್ರ ಹಾಡುಗಳ ರಸದೌತಣ ಹಾಗೂ ಪ್ರಕಾಶ್ ಜೈನ ದಾಸರಹಳ್ಳಿಯವರ ಸಂಗೀತದ ಹಾಡುಗಳು ಸಭಿಕರ ಗಮನವನ್ನು ಸೆಳೆದವು.

ಈ ಸಂದರ್ಭದಲ್ಲಿ ಪಂಚಮಸಾಲಿ ಸಮಾಜದ ಹಗರಿಬೊಮ್ಮನಹಳ್ಳಿ ಶಾಖಾ ಮಠದ ಶ್ರೀ ಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳು ಇಳಕಲ್ ವಿಜಯ ಮಹಾಂತೇಶ್ವರ ಮಠದ ಶ್ರೀ ಗುರು ಮಹಾಂತ ಮಹಾ ಶಿವಯೋಗಿಗಳು, ಹಗರಿಬೊಮ್ಮನಹಳ್ಳಿ ಶಾಸಕ ಎಸ್. ಭೀಮಾನಾಯ್ಕ್, ಜಿ.ಪಂ. ಮಾಜಿ ಸದಸ್ಯ ತೇಜಸ್ವಿ ಪಾಟೀಲ್, ಪಂಚಮಸಾಲಿ ಸಮಾಜದ ಮಾಜಿ ಅಧ್ಯಕ್ಷ ಬಾವಿ ಬೆಟ್ಟಪ್ಪ, ಬಸವರಾಜ್ ದಿಂಡೂರು, ಹರ ಜಾತ್ರಾ ಮಹೋತ್ಸವ ಸಮಿತಿಯ ಅಧ್ಯಕ್ಷ ಪ್ರಕಾಶ್ ಪಾಟೀಲ್, ಹರಪನಹಳ್ಳಿ ವೀಣಾ ಮಹಾಂತೇಶ್, ನಂಜನಗೌಡ್ರು ಹರಪನಹಳ್ಳಿ, ಎನ್.ಜಿ. ನಾಗನಗೌಡ್ರು, ವೀರೇಂದ್ರ ಪಾಟೀಲ್, ಹನಗವಾಡಿ ಗ್ರಾಪಂ ಅಧ್ಯಕ್ಷೆ ಕೆ.ಪಿ ಕವಿತಾ, ಉಪಾಧ್ಯಕ್ಷ ಎಸ್.ಎಂ. ರೇವಣಸಿದ್ದಪ್ಪ, ಧರ್ಮದರ್ಶಿಗಳಾದ ಪಿ.ಡಿ. ಶಿರೂರು, ಬಿ.ಸಿ. ಉಮಾಪತಿ, ಚಂದ್ರಶೇಖರ್ ಪೂಜಾರ್, ಜಿ.ಬಿ. ಹಾಲೇಶಗೌಡ, ದೇವೇಂದ್ರಪ್ಪ, ಅಜ್ಜಪ್ಪ ವಕೀಲರು, ಶಶಿಧರ್, ಪೂಜಾರ್, ವೀರೇಂದ್ರ ಗುಳಿಗಿ, ಬೇಳೂರು ಅಂಜಿನಪ್ಪ, ಚೆನ್ನಪ್ಪ ರೆಡ್ ಕ್ರಾಸ್ ಸಂಸ್ಥೆ, ಬಂಗಾರ ಸೋಮಣ್ಣ ಲಿಂಗರಾಜ್ ಸಂತೆಬೆನ್ನೂರು, ತೇಜಸ್ವಿ ಪಾಟೀಲ್, ಲತಾ ಮಲ್ಲಿಕಾರ್ಜುನ ಹರಪನಹಳ್ಳಿ ಮತ್ತಿತರರು ಹಾಜರಿದ್ದರು.

ಸ್ವಾಗತ ರಾಜ್ಯ ಮಹಿಳಾ ಘಟಕದ ಕಾರ್ಯಾಧ್ಯಕ್ಷೆ ರಶ್ಮಿ ಕುಂಕೋದ್, ಪ್ರಾರ್ಥನೆ ಕು. ನಿಕಿತಾ, ನಿರೂಪಣೆ ಚೈತ್ರ ತಿಪ್ಪೇಸ್ವಾಮಿ ಹೊನ್ನಾಳಿ ಮಾಡಿದರು.

## ತೃಪ್ತಿ ಕಲಿಯದೇ ಶಾಂತಿ ಇಲ್ಲ

**(3ನೇ ಪುಟದಿಂದ)** ಕಾರ್ಯಾಂಗ, ನ್ಯಾಯಾಂಗ, ಪತ್ರಿಕಾ ರಂಗಗಳು ಹಾಗೂ ಖಾಸಗಿ ವಲಯ ಸೇರಿದಂತೆ ಎಲ್ಲೆಡೆ ಭ್ರಷ್ಟಾಚಾರ ಹರಡಿದೆ. ಸಮಾಜದ ಎಲ್ಲರಲ್ಲೂ ಇಂದು ಸ್ವಾರ್ಥ ಹಾಗೂ ದುರಾಸೆ ಮನೋ ಭಾವ ಕಾಣುತ್ತಿದೆ ಎಂದು ಹೆಗಡೆ ವಿಷಾದಿಸಿದರು.

ಭ್ರಷ್ಟಾಚಾರ ನಡೆಸಿ ಜೈಲಿಗೆ ಹೋಗಿ ಬಂದವರನ್ನು ಸಂಭ್ರಮದಿಂದ ಸ್ವಾಗತಿಸುತ್ತಿದ್ದೇವೆ. ಆ ಮೂಲಕ ಶ್ರೀಮಂತನಾಗಲು ಹಾಗೂ ಅಧಿಕಾರ ಪಡೆಯಲು ಜೈಲಿಗೆ ಹೋದರೂ ಸರಿ ಎಂಬ ಸಂದೇಶವನ್ನು ಮಕ್ಕಳಿಗೆ ನೀಡುತ್ತಿದ್ದೇವೆ ಎಂದವರು ವಿಷಾದಿಸಿದರು.

ಸಮಾಜದ ಈ ಧೋರಣೆಯಿಂದ ಶಾಂತಿ ಹಾಗೂ ಸಮಾಧಾನಗಳು ಮರೆಯಾಗುತ್ತಿವೆ. ಮೌಲ್ಯ ಹಾಗೂ ಮಾನವೀಯತೆಗಳಿಲ್ಲದ ಸಮಾಜದಲ್ಲಿ ಸೌಹಾರ್ದತೆ ಸಾಧ್ಯವಿಲ್ಲ ಎಂದವರು ಹೇಳಿದರು.

ಮಕ್ಕಳಿಗೆ ತೃಪ್ತಿ ಹಾಗೂ ಮಾನವೀಯತೆ ಗುಣಗಳನ್ನು ಕಲಿಸುವ ಮೂಲಕ ಸಮಾಜದಲ್ಲಿ ಶಾಂತಿಯುತ ಬದಲಾವಣೆ ಬರಬೇಕಿದೆ ಎಂದವರು ಹೇಳಿದರು.

ಸಿದ್ದಗಂಗಾ ವಿದ್ಯಾಸಂಸ್ಥೆಯ ಮುಖ್ಯಸ್ಥೆ ಜಸ್ಟಿನ್ ಡಿಸೌಜ ಅವರು ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಸಿದ್ದಗಂಗಾ ಪಿಯು ಕಾಲೇಜಿನ ಪ್ರಾಂಶುಪಾಲ ಜೆ.ಸಿ. ನಿರಂಜನ್, ಶೈಕ್ಷಣಿಕ ಮುಖ್ಯಸ್ಥ ಎಲ್.ವಿ. ಸುಬ್ರಹ್ಮಣ್ಯ, ಉಪನ್ಯಾಸಕರಾದ ಗಣೇಶ್ ಭಟ್, ಆರ್.ಎಸ್. ಗಣೇಶ್ ಪ್ರಸಾದ್, ವಾಣಿಶ್ರೀ ಹಾಗೂ ಕೆ.ಎಸ್. ರೇಖಾರಾಣಿ ಉಪಸ್ಥಿತರಿದ್ದರು.

ಸಿದ್ದಗಂಗಾ ಸಂಸ್ಥೆಯ ಸಂಸ್ಥಾಪಕ ಶಿವಣ್ಣ ಅವರ ಪ್ರತಿಮೆಯನ್ನು ವೇದಿಕೆಯ ಮೇಲಿರಿಸುವ ಮೂಲಕ ಅವರಿಗೆ ಸ್ಮರಿಸಲಾಯಿತು.

ಅನುಷಾ ಸ್ವಾಗತಿಸಿದರು ಹಾಗೂ ರೇಖಾ ರಾಣಿ ಪ್ರಾಸ್ತಾವಿಕವಾಗಿ ಮಾತನಾಡಿದರು.

## ನಗರದಲ್ಲಿ ಇಂದು ಚಿನ್ನ, ಬೆಳ್ಳಿ ಕೆಲಸಗಾರರಿಗೆ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಮೆಂಟ್

ದಾವಣಗೆರೆ ದೈವಿಕ್ ಗೋಲ್ಡನ್ ಕ್ಲಬ್ ವತಿಯಿಂದ ಐಪಿಎಲ್ ಮಾದರಿಯಲ್ಲಿ ಚಿನ್ನ, ಬೆಳ್ಳಿ ಕೆಲಸಗಾರರಿಗೆ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಮೆಂಟನ್ನು ದಾವಣಗೆರೆ ಪ್ರೀಮಿಯರ್ ಲೀಗ್ ಇಂದಿನಿಂದ ಇದೇ ದಿನಾಂಕ 20ರ ವರೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಇಂದು ಬೆಳಿಗ್ಗೆ 9.30ಕ್ಕೆ ಟೂರ್ನಮೆಂಟ್‌ನ ಉದ್ಘಾಟನಾ ಸಮಾರಂಭವನ್ನು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ನೆರವೇರಿಸಲಿದ್ದಾರೆ. ರಾಷ್ಟ್ರೀಯ ಪ್ಯಾನೆಲ್ ಕ್ರಿಕೆಟ್ ತೀರ್ಪುಗಾರ ಕೇಶವ್ ಕೊಲ್ಲೆ, ಜಿಲ್ಲಾ ಯೋಗ ಒಕ್ಕೂಟ ಹಾಗೂ ದೈವಜ್ಞ ಹಿತರಕ್ಷಣಾ ವೇದಿಕೆ ಸಂಸ್ಥಾಪಕ ಹಾಗೂ ಗೌರವಾಧ್ಯಕ್ಷ ವಾಸುದೇವ ರಾಯ್ಕರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.




## ನಗರದಲ್ಲಿ ಇಂದು ವಿಜ್ಞಾನ, ಕಲಾ ವಸ್ತುಪ್ರದರ್ಶನ

ಶ್ರೀ ತರಳಬಾಳು ಜಗದ್ಗುರು ರೆಸಿಡೆನ್ಷಿಯಲ್ ಸ್ಕೂಲ್ (ಅನು ಭವ ಮಂಟಪ) ವಾರ್ಷಿಕೋತ್ಸವದ ಅಂಗವಾಗಿ ವಿಜ್ಞಾನ ಮತ್ತು ಕಲಾ ವಸ್ತು ಪ್ರದರ್ಶನದ ಉದ್ಘಾಟನಾ ಸಮಾರಂಭವು ಶಾಲಾವರಣದ ರಂಗಮಂಟಪದಲ್ಲಿ ಇಂದು ಬೆಳಿಗ್ಗೆ 8.30 ಕ್ಕೆ ನಡೆಯಲಿದೆ.

ಶ್ರೀ ತರಳಬಾಳು ಸ್ಕೂಲ್ (ಐಸಿಎಸ್‌ಇ) ಪ್ರಾಚಾರ್ಯರಾದ ಕೆ.ಬಿ. ಮಂಜುಳ ಅಧ್ಯಕ್ಷತೆ ವಹಿಸ ಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಕಾಸ್ ವಿಶ್ವನಾಥ್, ವಿವೇಕ್ ಬಂಕಾಪುರ, ಡಾ. ಚೈತ್ರ ಬಿ. ಅವಿನಾಶ್, ಹೆಚ್.ಪಿ. ವಿಶೇಷ್, ಎನ್.ಜೆ. ಅವಿನಾಶ್ ಗೌಡ, ಅವಿ ನಾಶ್ ಎಂ. ಕಾತೂರ್, ಡಿ.ಎಸ್. ಚಂದನ್ ಭಾಗವಹಿಸಲಿದ್ದಾರೆ.

# ಉಕ್ಕಡಗಾತ್ರಿ, ಮಲೇಬೆನ್ನೂರು, ಕೊಮಾರನಹಳ್ಳಿಯಲ್ಲಿ ಸಂಕ್ರಾಂತಿ ಸಂಭ್ರಮ



ಮಲೇಬೆನ್ನೂರು, ಜ.15- ಮಕರ ಸಂಕ್ರಾಂತಿ ಹಬ್ಬವನ್ನು ಭಾನುವಾರ ಸುಕ್ಷೇತ್ರ ಉಕ್ಕಡಗಾತ್ರಿ, ಮಲೇಬೆನ್ನೂರು, ಕೊಮಾರನಹಳ್ಳಿ ಸೇರಿದಂತೆ ವಿವಿಧೆಡೆ ಸಂಭ್ರಮದಿಂದ ಆಚರಿಸಲಾಯಿತು.

ಉಕ್ಕಡಗಾತ್ರಿಯ ತುಂಗಭದ್ರಾ ನದಿಯಲ್ಲಿ ಸಾವಿರಾರು ಜನ ಪುಣ್ಯಸ್ನಾನ ಮಾಡಿ, ಗಂಗೆ ಪೂಜೆ ನೆರವೇರಿಸಿ ಅಜ್ಜಯ್ಯನ ದರ್ಶನ ಪಡೆದು ನಂತರ ಮನೆಯಿಂದ ತಂದಿದ್ದ ರೊಟ್ಟಿ, ಬುತ್ತಿ ಊಟ ಸವಿದು ಸಂಭ್ರಮಿಸಿದರು.

ನದಿಯಲ್ಲಿ ನೀರಿನ ಪ್ರಮಾಣ ಕಡಿಮೆ ಇದ್ದುದರಿಂದ ಜನರು ನದಿ ನಡುಗಡ್ಡೆಗಳಿಗೆ ತೆರಳಿ ಸಂಕ್ರಾಂತಿ ಹಬ್ಬ ಆಚರಿಸಿದರು.

ಮಲೇಬೆನ್ನೂರಿನ ಹೊರವಲಯದಲ್ಲಿರುವ ಭದ್ರಕಾಳಮ್ಮಸಹಿತ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಸಂಕ್ರಾಂತಿ ಪ್ರಯುಕ್ತ ವಿಶೇಷ ಪೂಜೆ, ಅಭಿಷೇಕ ಮಾಡಲಾಯಿತು. ಭಕ್ತರು ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.ಭಕ್ತರಿಗೆ ರೊಟ್ಟಿ, ಬುತ್ತಿ ಉಂಡೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಸಾವಿರಾರು ಜನ ದೇವಸ್ಥಾನಕ್ಕೆ ಆಗಮಿಸಿದ್ದರು.

ಪಟ್ಟಣದ ಗ್ರಾಮ ದೇವತೆ ಶ್ರೀ ಏಕನಾಥೇಶ್ವರಿ ದೇವಸ್ಥಾನದಲ್ಲೂ ವಿಶೇಷ ಪೂಜೆ ಹಾಗೂ ಪ್ರಸಾದವಾಗಿ ಪೊಂಗಲ್ ವಿತರಿಸಲಾಯಿತು.

ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಯಿತು. ಇಲ್ಲಿ ಕೂಡಾ ಭಕ್ತರಿಗೆ ಪೊಂಗಲ್ ವಿತರಿಸಿದರು. ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಆಂಧ್ರ ರೆಡ್ಡಿ ಜನರು ವಾಸಿಸುವ ಜಿಗಳಿ ಕ್ಯಾಂಪ್, ಭಾಸ್ಕರರಾವ್ ಕ್ಯಾಂಪ್, ಹಳ್ಳಿಹಾಳ್ ಕ್ಯಾಂಪ್, ನಂದೀಶ್ವರ ಕ್ಯಾಂಪ್, ಮಲ್ಲನಾಯ್ಕನಹಳ್ಳಿ ಕ್ಯಾಂಪ್, ನಿಟ್ಟೂರು ಕ್ಯಾಂಪ್‌ಗಳಲ್ಲಿ ಸಂಕ್ರಾಂತಿ ಹಬ್ಬವನ್ನು ವಿಶೇಷವಾಗಿ ಆಚರಿಸಲಾಯಿತು.

# ಹೊನ್ನಾಳಿ : ಸಂಭ್ರಮದ ಮಕರ ಸಂಕ್ರಾಂತಿ



ಹೊನ್ನಾಳಿ, ಜ. 15 - ಭಾನುವಾರ ಪವಿತ್ರ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಹೊನ್ನಾಳಿ ಪಟ್ಟಣ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ನೂರಾರು ಭಕ್ತರು ತಮ್ಮತಮ್ಮ ಮನೆಗಳಲ್ಲಿ ಪೂಜೆ ಸಲ್ಲಿಸಿ, ನಂತರ ಹೊನ್ನಾಳಿ ಪಟ್ಟಣದ ಅತೀ ಸಮೀಪವೇ ಇರುವ ತುಂಗಭದ್ರಾ ನದಿಯಲ್ಲಿ ಪುಣ್ಯ ಸ್ನಾನ ಮಾಡಿ ನದಿ ದಡದಲ್ಲಿರುವ ಸೂರ್ಯ ಪುತ್ರ ಪ್ರಾಣ ದೇವರಾದ ಶ್ರೀ ಆಂಜನೇಯ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ಅಲ್ಲಿ ಪೂಜೆ ಸಲ್ಲಿಸಿದರು.

ಪವಿತ್ರ ತುಂಗಭದ್ರಾ ನದಿ ಸೇರಿದಂತೆ, ಸೂರ್ಯ ದೇವರಿಗೆ ಬಗೆ ಬಗೆಯ ಅಡುಗೆಗಳ ನೈವೇದ್ಯ ಮಾಡಿ, ನಂತರ ಮಹಿಳೆಯರು ಮಕ್ಕಳು ಸಕುಟುಂಬ ಸಮೇತರಾಗಿ ಭಕ್ತರು ನದಿಯ ದಡದಲ್ಲಿ ಕುಳಿತು ಮನೆಯಿಂದ ತಯಾರಿಸಿಕೊಂಡು ಬಂದಿದ್ದ ಬಗೆ ಬಗೆಯ ವಿಶೇಷ ಅಡುಗೆಗಳನ್ನು, ಜೊತೆಗೆ ಎಳ್ಳು ಬೆಲ್ಲವನ್ನು ಪರಸ್ಪರ ಹಂಚಿ ಕೊಂಡು ಶುಭ ಕೋರಿ ನದಿ ದಡದಲ್ಲಿ ಊಟ ಮಾಡುವ ಮೂಲಕ ಮಕರ ಸಂಕ್ರಾಂತಿ ಹಬ್ಬ ಆಚರಿಸಿದರು.

# ಹೊರಗುತ್ತಿಗೆ ನೌಕರರಿಗೆ ತಾರತಮ್ಯ: ಖಂಡನೆ

ದಾವಣಗೆರೆ, ಜ. 15- ನಗರ ಸ್ಥಳೀಯ ಸಂಸ್ಥೆಗಳ ಹೊರ ಗುತ್ತಿಗೆ ನೌಕರರನ್ನು ಖಾಯಂಗೊಳಿಸದೇ ಹೊರ ಗುತ್ತಿಗೆಯಲ್ಲೇ ಮುಂದುವರೆಸುವ ಸರ್ಕಾರದ ತಾರತಮ್ಯ ನೀತಿಯನ್ನು ಮಹಾನಗರ ಪಾಲಿಕೆಯ ಹೊರ ಗುತ್ತಿಗೆ ಘನತ್ಯಾಜ್ಯ ವಿಲೇವಾರಿ ವಾಹನ ಚಾಲಕರ ಸಂಘ ತೀವ್ರವಾಗಿ ಖಂಡಿಸುತ್ತದೆ ಎಂದು ಸಂಘದ ರಾಜ್ಯ ಗೌರವಾಧ್ಯಕ್ಷ ಎಂ. ವೀರೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುವ ಪೌರ ಕಾರ್ಮಿಕರನ್ನು ಖಾಯಂಗೊಳಿಸಲು ಮುಂದಾಗಿರುವ ಸರ್ಕಾರ ಪೌರ ಕಾರ್ಮಿಕರೊಟ್ಟಿಗೆ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ವಾಹನ ಚಾಲಕರು, ನೀರು ಸರಬರಾಜು ಸಹಾಯಕರು, ಲೋಡರ್ಸ್ ಕ್ಲೀನರ್ಸ್, ಹೆಲ್ಪರ್ಸ್ ಸೇರಿದಂತೆ 15 ಸಾವಿರಕ್ಕೂ ಅಧಿಕ ನೌಕರರನ್ನು ಗುತ್ತಿಗೆಯಲ್ಲಿಯೇ ಉಳಿಸಿ ತಾರತಮ್ಯ ಮಾಡಲಾಗುತ್ತಿದೆ ಎಂದು ದೂರಿದರು.

ನಗರಗಳ ಸ್ವಚ್ಛತೆ ಮತ್ತು ಕುಡಿಯುವ ನೀರು ನಿರ್ವಹಣೆಯಲ್ಲಿ ಹೊರ ಗುತ್ತಿಗೆ ನೌಕರರ ಪಾತ್ರ ಮಹತ್ವದ್ದಾಗಿದೆ. 2017 ರಲ್ಲಿ ಪೌರ ಕಾರ್ಮಿಕರ ನೇಮಕಾತಿ ಮಾಡಿದ ಸಂದರ್ಭದಲ್ಲಿ ಹೊರ ಗುತ್ತಿಗೆ ನೌಕರರನ್ನು ಗುತ್ತಿಗೆಯಲ್ಲಿಯೇ ಉಳಿಸಲಾಯಿತು. ಸರ್ಕಾರದ ನೀತಿ ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಎನ್ನುವಂತಾಗಿದೆ ಎಂದರು.

ಇದೇ ದಿನಾಂಕ 25 ರೊಳಗಾಗಿ ನಗರ ಸ್ಥಳೀಯ ಸಂಸ್ಥೆಗಳ ಹೊರ ಗುತ್ತಿಗೆ ನೌಕರರ ನೇರ ಪಾವತಿ ಹಾಗೂ ಖಾಯಂಗೆ ಕ್ರಮ ಕೈಗೊಳ್ಳದಿದ್ದಲ್ಲಿ ಜ. 31 ರಿಂದ ರಾಜ್ಯಾಧ್ಯಕ್ಷರ ಆದೇಶದ ಮೇರೆಗೆ ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಿದ್ದೇವೆ ಎಂದು ಎಚ್ಚರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಎನ್. ನೀಲಗಿರಿಯಪ್ಪ, ಎಂ.ಆರ್. ದುಗ್ಗೇಶ್, ಕಿರಣ್ ಕುಮಾರ್, ರಾಧಾಕೃಷ್ಣ ಇದ್ದರು.

## ನಗರದಲ್ಲಿ ಇಂದು ವಾಸವಿ ವಿಜ್ಞಾನ - ಕಲಾ ವೈಭವ

ಶ್ರೀ ವಾಸವಿ ಇಂಗ್ಲಿಷ್ ಮೀಡಿಯಂ ನರ್ಸರಿ ಮತ್ತು ಹಿರಿಯ ಪ್ರಾಥಮಿಕ ಶಾಲೆ ವತಿಯಿಂದ ಶ್ರೀ ವಾಸವಿ ವಿಜ್ಞಾನ ಮತ್ತು ಕಲಾ ವೈಭವ ಕಾರ್ಯಕ್ರಮವು ಇಂದು ಬೆಳಿಗ್ಗೆ 10.30 ಕ್ಕೆ ಶಾಲಾ ಆವರಣದಲ್ಲಿ ನಡೆಯಲಿದೆ.

ಅಧ್ಯಕ್ಷತೆಯನ್ನು ಶಾಲಾ ಚೇರ್ಮನ್ ಆರ್.ಎಲ್. ಪ್ರಭಾಕರ್ ವಹಿಸುವರು. ಮುಖ್ಯ ಅತಿಥಿಯಾಗಿ ಇ.ಎಂ. ಮಂಜುನಾಥ ಆಗಮಿಸುವರು. ಆರ್.ಎಸ್. ನಾರಾಯಣಸ್ವಾಮಿ, ಕೆ.ಎನ್. ಅನಂತರಾಮ ಶೆಟ್ಟಿ, ಆರ್.ಜಿ. ಶ್ರೀನಿವಾಸಮೂರ್ತಿ, ಆರ್.ಜಿ. ನಾಗೇಂದ್ರ ಪ್ರಕಾಶ್, ನಾಗರಾಜ್. ವಿ. ಕಾಸಲ್, ಕಾಸಲ್ ಎಸ್. ಸತೀಶ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

## ನಗರದಲ್ಲಿ ಕುರಿ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಕುರಿ ಮತ್ತು ಮೇಕೆ ತರಬೇತಿಯು ಇಂದು ಮತ್ತು ನಾಳೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ: 08192-233787.




# ತುಂಗಭದ್ರಾ ನದಿ ದಡದಲ್ಲಿ ಸಂಭ್ರಮದ ಸಂಕ್ರಾಂತಿ

ಹರಿಹರ, ಜ. 15- ನಗರದ ತುಂಗಭದ್ರಾ ನದಿಯಲ್ಲಿ ಮಕರ ಸಂಕ್ರಾಂತಿ ಹಬ್ಬವನ್ನು ಸಾರ್ವಜನಿಕರು ಸಡಗರ, ಸಂಭ್ರಮದಿಂದ ಆಚರಿಸಿದರು.

ಹರಿಹರ, ದಾವಣಗೆರೆ, ಹರಪನಹಳ್ಳಿ, ರಾಣೇಬೆನ್ನೂರು ತಾಲ್ಲೂಕುಗಳು ಸೇರಿದಂತೆ ಇತರೆ ಭಾಗಗಳಿಂದ ಆಟೋ, ಬೈಕ್, ಟ್ರ್ಯಾಕ್ಟರ್, ಕಾರ್ ಇತರೆ ವಾಹನಗಳಲ್ಲಿ ಕುಟುಂಬದ ಸದಸ್ಯರು ಆಗಮಿಸಿ, ನದಿಯಲ್ಲಿ ಸ್ನಾನ ಮಾಡಿ ನದಿಗೆ ವಿಶೇಷ ಪೂಜೆ ಸಲ್ಲಿಸಿದರು.

ಎಳ್ಳು, ಬೆಲ್ಲವನ್ನು ವಿನಿಮಯ ಮಾಡಿಕೊಂಡು ಜೋಳದ ರೊಟ್ಟಿ, ಸಜ್ಜೆ ರೊಟ್ಟಿ, ಚಿತ್ರಾನ್ನ, ಬುತ್ತಿ ಚಟ್ನಿ, ಹೆಸರುಕಾಳು, ಕಡಲೆಕಾಳು, ಮುಳಗಾಯಿ, ಬೆಂಡಿಕಾಯಿ, ಜವಳಿಕಾಯಿ, ಹಾಗಲಕಾಯಿ, ಅವರೆಕಾಯಿ, ಸೇರಿದಂತೆ ವಿವಿಧ ಪಲ್ಯ, ಕೆನೆ ಮೊಸರು, ಸವತೆಕಾಯಿ, ಮೂಲಂಗಿ, ಉಳ್ಳಾಗಡ್ಡಿ ಸೇರಿದಂತೆ ವಿವಿಧ ಬಗೆಯ ಆಹಾರ ಪದಾರ್ಥಗಳನ್ನು ಸೇವಿಸಿ ಎಲೆ, ಅಡಿಕೆ ಹಾಕಿಕೊಂಡು ಸಂಭ್ರಮಿಸಿದರು. ಮಕ್ಕಳು ಆಟಿಕೆಯ ವಸ್ತುಗಳಾದ ಬಾಲ್, ರಿಂಗ್, ಹಗ್ಗ, ಇವುಗಳ ಮೂಲಕ ಆಟವನ್ನು ಆಡುತ್ತಿದ್ದರು. ಬಿಸಿಲಿನ ತಾಪದಿಂದ ಕಬ್ಬಿನರಸ, ಐಸ್ ಕ್ರೀಂ, ಎಳನೀರು, ಜ್ಯೂಸ್ ಸೇವಿಸಿ ಮನಸ್ಸನ್ನು ತಂಪು ಮಾಡಿಕೊಂಡರು. ಜೊತೆಗೆ ಸೇಂಗಾ, ಕಡಲೆಕಾಯಿ ಗಿಡ, ಸೂರ್ಯಕಾಂತಿ ಸಂಜೆ ಕಾರಾ-ಮಂಡಕ್ಕಿ ಮೆಣಸಿನಕಾಯಿ ಬಜಿ, ಆಂಬೊಡೆ, ಟಿ, ಕಾಫಿ ಸೇವಿಸಿ ಮನೆಗಳಿಗೆ ತೆರಳಿದರು.

ನಗರದ ನದಿ ದಂಡೆಯ ಮೇಲೆ ಇರುವ ಅಯ್ಯಪ್ಪಸ್ವಾಮಿ, ಶ್ರೀ ಹರಿಹರೇಶ್ವರ ದೇವಾಲಯ, ರಾಘವೇಂದ್ರ ಸ್ವಾಮಿ ಮಠದ ಆವರಣದಲ್ಲಿ ಕುಟುಂಬದ ಸದಸ್ಯರು ಕುಳಿತುಕೊಂಡು ಊಟ ಸವಿದರು

# ಬೇಸಿಗೆಗೆ ಪಾದಾರ್ಪಣೆ ಮಾಡುವ ಕಾಲ ಸಂಕ್ರಾಂತಿ ಹಬ್ಬ



**ಹರಪನಹಳ್ಳಿ**

ಹರಪನಹಳ್ಳಿ, ಜ.15- ಸಂಕ್ರಾಂತಿ ಹಬ್ಬ ಚಳಿಗಾಲ ಮುಗಿಸಿ ಬೇಸಿಗೆ ಕಾಲಕ್ಕೆ ಪಾದಾರ್ಪಣೆ ಮಾಡುವ ಕಾಲ. ಈ ಹಬ್ಬದಲ್ಲಿ ಎಳ್ಳು-ಬೆಲ್ಲ ಹಂಚಿ ಆಚರಣೆ ಮಾಡುವುದರಲ್ಲಿ ವೈಜ್ಞಾನಿಕ ಮಹತ್ವವಿದೆ. ಸತತವಾಗಿ ಆರು ವರ್ಷಗಳ ಕಾಲ ಕಲೆ, ಸಾಹಿತ್ಯ, ಸಂಗೀತಕ್ಕೆ ಆದ್ಯತೆ ನೀಡಿದ್ದು, ಈ ಬಾರಿ ವಿಭಿನ್ನವಾದ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.

ತಾಲ್ಲೂಕಿನ ತಾವರಗೊಂದಿ ಗ್ರಾಮದ ನದಿ ತಟದಲ್ಲಿ ಮಕರ ಸಂಕ್ರಾಂತಿ ಪ್ರಯುಕ್ತ ಎಂ.ಪಿ.ರವೀಂದ್ರ ಪ್ರತಿಷ್ಠಾನ ಹಾಗೂ ಎಂ.ಪಿ.ಲತಾ ಅಭಿಮಾನಿಗಳ ಬಳಗದಿಂದ ಕರ್ನಾಟಕ ಜಾನಪದ ನೃತ್ಯ ದರ್ಶನಂ ಹಾಗೂ ಔತಣಕೂಟ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಿನಿಮಾ, ಧಾರಾವಾಹಿಗಳ ಭರಾಟೆಗಳ ಮಧ್ಯೆ ಗ್ರಾಮೀಣ ಸೊಗಡಿನ ಕಲೆಗಳನ್ನು ಜನರಿಗೆ ಪರಿಚಯಿಸುವ ದೃಷ್ಟಿಯಿಂದ ಕಳೆದ ಬಾರಿ ದೇಶೀಯ ಕಲೆಗಳನ್ನು ಪ್ರಸ್ತುತ ಪಡಿಸಲಾಗಿತ್ತು. ಈ ಬಾರಿ ಕರ್ನಾಟಕದ ಕಲೆಗಳಾದ ಡೊಳ್ಳು ಕುಣಿತ, ಕಂಸಾಳೆ, ಯಕ್ಷಗಾನ, ಭರತನಾಟ್ಯದಂತಹ ಕಲೆಗಳನ್ನು ಪ್ರದರ್ಶಿಸಲಾಗುತ್ತಿದೆ. ತಾವೆಲ್ಲರೂ ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಎಳ್ಳು-ಬೆಲ್ಲ ನೀಡಿ ಸಂಕ್ರಾಂತಿಯ ಶುಭಾಶಯ ಕೋರಿದರು.

ಕಾರ್ಯಕ್ರಮಕ್ಕೆ ಅಪಾರ ಸಂಖ್ಯೆಯಲ್ಲಿ ಜನರು ಸೇರಿದ್ದು, ಆಗಮಿಸಿದವರಿಗೆಲ್ಲರಿಗೂ ರೊಟ್ಟಿ, ಬುತ್ತಿ, ಸೊಪ್ಪು, ಅನ್ನ, ಸಾರು ಸೇರಿದಂತೆ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಕ್ಕಳ ಡೊಳ್ಳು ಕುಣಿತ ಹಾಗೂ ಲಂಬಾಣಿ ನೃತ್ಯ, ಸುಗ್ಗಿ ಹಾಡು, ಪೂಜಾ ಕುಣಿತ, ಕೊಡವ ನೃತ್ಯ, ಪಟ ಕುಣಿತ ನೆರೆದಿದ್ದ ಜನರ ಮನಸೂರೆಗೊಳಿಸಿದವು. ಈ ವೇಳೆ ತಾವರಗೊಂದಿ, ನಿಟ್ಟೂರು ಗ್ರಾಮಸ್ಥರು ಎಂ.ಪಿ.ಲತಾ ಮಲ್ಲಿಕಾರ್ಜುನ್ ಅವರನ್ನು ಸನ್ಮಾನಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಎಂ.ಪಿ.ಲತಾ ಮಲ್ಲಿಕಾರ್ಜುನ್ ನೇತೃತ್ವದಲ್ಲಿ ನದಿ ತಟದಲ್ಲಿ ಗಂಗಾ ಪೂಜೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಹೆಚ್.ಎಂ.ಮಲ್ಲಿಕಾರ್ಜುನ, ಗೌತಮ ಪ್ರಭು, ಪುಷ್ಪಾ ದಿವಾಕರ್, ಐಗೋಳ್ ಚಿದಾನಂದಪ್ಪ, ಜಿಪಂ ಮಾಜಿ ಸದಸ್ಯರಾದ ತೆಲಿಗಿ ಈಶಪ್ಪ, ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ್, ತಾಲ್ಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಕಂಚಿಕೇರಿ ಜಯಲಕ್ಷ್ಮಿ, ಅನುರಾಧ ಕೊಟ್ರೇಶ್, ಮತ್ತಿಹಳ್ಳಿ ಶಿವಣ್ಣ, ಪುರಸಭೆ ಸದಸ್ಯರಾದ ಎಂ.ವಿ.ಅಂಜಿನಪ್ಪ, ಗೊಂಗಡಿ ನಾಗರಾಜ್, ಲಾಟಿ ದಾದಾಪೀರ್, ಗಣೇಶ್ ಹಲುವಾಗಲು ಗ್ರಾಪಂ ಅಧ್ಯಕ್ಷ ರುದ್ರಪ್ಪ, ಎಚ್.ಟಿ.ವನಜಾಕ್ಷಮ್ಮ ಶಿವಯೋಗಿ, ಗುಂಡಗತ್ತಿ ನೇತ್ರಾವತಿ, ಲಕ್ಷ್ಮಿ ಚಂದ್ರಶೇಖರ್, ಭಾಗ್ಯಮ್ಮ ರತ್ನಮ್ಮ ಸೋಮಪ್ಪ, ಮುಖಂಡರಾದ ಹಲುವಾಗಲು ಎನ್.ಟಿ. ಸೋಮಣ್ಣ, ಕಣಿವಿಹಳ್ಳಿ ಚಂದ್ರಶೇಖರ್, ಮೈದೂರು ರಾಮಣ್ಣ, ಮಂಜುನಾಥ್, ಉದಯಶಂಕರ್, ಶಿವರಾಜ, ಸಾಸ್ವಿಹಳ್ಳಿ ನಾಗರಾಜ್, ಮಂಜುಳಾ ಗುರುರಾಜ್, ಬಾಣದ ಅಂಜಿನಪ್ಪ, ಹಾರಕನಾಳು ಪ್ರಕಾಶಗೌಡ, ಹಲಗೇರಿ ಮಂಜಪ್ಪ, ಎಲ್.ಎಂ.ನಾಯ್ಕ, ಭರಮನಗೌಡ, ನೇಮ್ಯಾನಾಯ್ಕ್, ಎಚ್.ಟಿ.ಹನುಮಂತಪ್ಪ, ವೇದುನಾಯ್ಕ, ಚಿಕ್ಕೇರಿ ಬಸಪ್ಪ, ಪ್ರಸಾದ ಕಾವಡಿ, ಕುಂಚೂರು ಇಬ್ರಾಹಿಂ, ಶೃಂಗಾರ ತೋಟದ ಅಶೋಕ, ಹುಲಿಕಟ್ಟಿ ಚಂದ್ರಪ್ಪ ಸೇರಿದಂತೆ, ಇತರರು ಭಾಗವಹಿಸಿದ್ದರು.

# ಜಯೇಶ್ ಪೂಜಾರಿಯಿಂದ ಗಡ್ಕರಿಗೆ ಕರೆ

**ಬೆಳಗಾವಿ ಜೈಲಿನಿಂದಲೇ ಬೆದರಿಕೆ ಕರೆ**

ನಾಗಪುರ, ಜ. 15 – ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಕಚೇರಿಗೆ ಬೆದರಿಕೆ ಕರೆ ಮಾಡಿದ ವ್ಯಕ್ತಿ ಬೆಳಗಾವಿಯ ಜೈಲಿನಲ್ಲಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಭೂಗತ ದಾವೂದ್ ಇಬ್ರಾಹಿಂ ತಂಡದವನು ಎಂದು ಹೇಳಿಕೊಂಡಿದ್ದ ಜಯೇಶ್ ಪೂಜಾರಿ, 100 ಕೋಟಿ ರೂ. ನೀಡುವಂತೆ ಬೆದರಿಕೆ ಹಾಕಿದ್ದ. ಜೈಲಿನ ಒಳಗಿನಿಂದ ಆತ ಕರೆ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ನಾಗಪುರ ಪೊಲೀಸರ ಅಪರಾಧ ದಳದ ತಂಡ ಬೆಳಗಾವಿಗೆ ಶನಿವಾರ ರಾತ್ರಿ ತಲುಪಿದೆ. ಸೋಮವಾರ ಪೂಜಾರಿ ವಿಚಾರಣೆ ನಡೆಸಲು ಅನುಮತಿ ಕೇಳಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಹತ್ಯೆ ಪ್ರಕರಣದಲ್ಲಿ ಪೂಜಾರಿಗೆ ಮರಣದಂಡನೆಯಾಗಿದೆ.

ಈತ 2016ರಲ್ಲಿ ಜೈಲಿನಿಂದ ತಪ್ಪಿಸಿಕೊಂಡಿದ್ದ. ನಂತರ ಆತನನ್ನು ಪೊಲೀಸರು ಬಂಧಿಸಿದ್ದರು.

ಪೂಜಾರಿ ಈ ಹಿಂದೆ ಜೈಲಿನಿಂದ ಹಿರಿಯ ಅಧಿಕಾರಿಗಳಿಗೆ ಬೆದರಿಕೆ ಕರೆ ಮಾಡಿದ್ದ ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ.



ದಾವಣಗೆರೆಯ ಉದ್ಯಾನವನವೊಂದರಲ್ಲಿ ಸಂಕ್ರಾಂತಿ ಸಂಭ್ರಮದಲ್ಲಿ ಆಟೋಟಗಳಲ್ಲಿ ಮೈಮರೆತ ಜನತೆ.

## ಜೋ ಬಿಡೆನ್ ನಿವಾಸದಲ್ಲಿ ಇನ್ನಷ್ಟು ಗೌಪ್ಯ ದಾಖಲೆಗಳ ಪತ್ತೆ

ವಾಷಿಂಗ್ಟನ್, ಜ. 15 – ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ಅವರ ನಿವಾಸದಲ್ಲಿ ಇನ್ನೂ ಐದು ಪುಟಗಳ ಗುಪ್ತ ದಾಖಲೆ ಪತ್ತೆಯಾಗಿದೆ. ಇದುವರೆಗೂ ಅವರ ಮನೆಯಿಂದ 24 ಗುಪ್ತ ದಾಖಲೆಗಳು ಪತ್ತೆಯಾಗಿವೆ. ಈ ದಾಖಲೆಗಳಲ್ಲಿ ಯಾವ ಮಾಹಿತಿ ಇದೆ ಬಹಿರಂಗ ಪಡಿಸಿಲ್ಲ. ಜೋ ಬಿಡೆನ್ ಅವರು 2009ರಿಂದ 2016ರ ನಡುವೆ ಬರಾಕ್ ಒಬಾಮಾ ಆಡಳಿತದಲ್ಲಿ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು.

ಈ ದಾಖಲೆಗಳ ಕುರಿತು ಅಧ್ಯಕ್ಷರ ಕಚೇರಿ ಪಾರದರ್ಶಕ ಮಾಹಿತಿ ನೀಡುತ್ತಿಲ್ಲ ಎಂಬ ಟೀಕೆಗಳು ವ್ಯಕ್ತವಾಗುತ್ತಿವೆ. ಈ ಬಗ್ಗೆ ಹೇಳಿಕೆ ನೀಡಿರುವ ಬಿಡೆನ್ ಅವರ ವಕೀಲ ಬಾಬ್ ಬ್ಯೂರ್, ಪಾರದರ್ಶಕತೆಯ ಜೊತೆಗೆ ತನಿಖೆಯ ಪ್ರಾಮಾಣಿಕತೆಯನ್ನು ರಕ್ಷಿಸಬೇಕಿದೆ. ಇದರ ನಡುವೆ ಸಮತೋಲನ ಕಾಯ್ದುಕೊಳ್ಳಲಾಗುತ್ತಿದೆ ಎಂದಿದ್ದಾರೆ.

ತಮ್ಮ ಮನೆಯಲ್ಲಿ ಪತ್ತೆಯಾದ ಗೌಪ್ಯ ದಾಖಲೆಗಳ ಬಗ್ಗೆ ನನಗೇನೂ ಗೊತ್ತಿಲ್ಲ ಎಂದು ಅಧ್ಯಕ್ಷ ಬಿಡೆನ್ ಹೇಳಿದ್ದರು.

## ರಿಮೋಟ್ ಮತದಾನಕ್ಕೆ ಪ್ರತಿಪಕ್ಷಗಳ ಆಕ್ಷೇಪ

ನವದೆಹಲಿ, ಜ. 15 – ವಲಸೆ ಕಾರ್ಮಿಕರು ರಿಮೋಟ್ ಮತಯಂತ್ರದ ಮೂಲಕ ಮತ ಚಲಾಯಿಸಲು ಅವಕಾಶ ಮಾಡಿಕೊಡುವುದಕ್ಕೆ ಬಹುತೇಕ ಪಕ್ಷಗಳು ಆಕ್ಷೇಪ ಹೊಂದಿವೆ ಎಂದು ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್ ಹೇಳಿದ್ದಾರೆ.

ಕಾಂಗ್ರೆಸ್, ಜೆಡಿಯು, ಸಿಪಿಐ, ಸಿಪಿಐ(ಎಂ), ನ್ಯಾಷನಲ್ ಕಾನ್ಫರೆನ್, ಜೆ.ಎಂ.ಎಂ. ಸೇರಿದಂತೆ ಹಲವು ಪಕ್ಷಗಳ ಸಭೆಯ ನಂತರ ಅವರು ಈ ಹೇಳಿಕೆ ನೀಡಿದ್ದಾರೆ.

ರಿಮೋಟ್ ಮತಯಂತ್ರದ ಬಳಕೆ ವಿಚಾರದಲ್ಲಿ ದೊಡ್ಡ ಲೋಪಗಳಿವೆ. ವಲಸೆ ಕಾರ್ಮಿಕರ ವ್ಯಾಖ್ಯಾನವೇ ಸ್ಪಷ್ಟವಾಗಿಲ್ಲ ಎಂದವರು ತಿಳಿಸಿದ್ದಾರೆ.


**JOB Opportunity** TATA

Age limit - 35 to 60 Years. Work from anywhere in India
ಹಿರಿಯ ನಾಗರಿಕರಿಗೆ ಮತ್ತು ನಿವೃತ್ತಿ ಹೊಂದಿದವರಿಗೆ ಹಾಗೂ ಮಹಿಳೆಯವರಿಗೆ ವಿಶೇಷ ಆಹ್ವಾನ

**NEW BRANCH OPENED @ DAVANAGERE.**



- Enjoy unlimited earning opportunity
- Work from home / Part Time/ Full time or consulting Basis
- Zero intial capital investment
- Travel abroad to our conventions
- with Fixed salary Medical Benefits and incentives



No Registration Fee

Limited Seat Only

*Start your Journey from home maker to Business women*

*Start your second Innings of your life with a unique business opportunity*

Now you can earn an income even if you are retired, here is your unique opportunity to be self-reliant

**ಸುವರ್ಣಾವಕಾಶ**

ಹಿರಿಯ ನಾಗರಿಕರಿಗೆ, ಉದ್ಯಮಿಗಳಿಗೆ/ ಅನಿವಾಸಿ ಭಾರತಿಯರಿಗೆ/ಗೃಹಿಣಿಯರಿಗೆ ನಿವೃತ್ತ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರಿಗೆ, ಖಾಸಗಿ ನೌಕರರು / ಶಿಕ್ಷಕರು / ವೈದ್ಯರು / ವಕೀಲರು / ನಿವೃತ್ತ ಬ್ಯಾಂಕ್ ನೌಕರರು ಮತ್ತು ಮಾಜಿ ರಕ್ಷಣಾಧಿಕಾರಿ ಇದೊಂದು ಸುವರ್ಣಾವಕಾಶ.

**9 8 4 4 7 4 5 8 5 6**

**ಎಸ್.ಎಸ್. ಆಸ್ಪತ್ರೆ ದಾವಣಗೆರೆ**

ರಾಷ್ಟ್ರೀಯ ಹೆದ್ದಾರಿ ಬೈಪಾಸ್ ರಸ್ತೆ, ದಾವಣಗೆರೆ.

**ಉಚಿತ ಹಾಗು ರಿಯಾಯಿತಿ ದರದಲ್ಲಿ ಆರೋಗ್ಯ ಚಿಕಿತ್ಸೆ**

ಮಕರಸಂಕ್ರಾತಿ ಮತ್ತು ಗಣರಾಜ್ಯೋತ್ಸವದ ಪ್ರಯುಕ್ತ ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದಿಂದ ನಗರದ ಎಸ್.ಎಸ್. ಆಸ್ಪತ್ರೆಯಲ್ಲಿ ಜನವರಿ 13 ರಿಂದ 31 ರ ವರೆಗೆ ಸಾಮಾನ್ಯ ಮತ್ತು ಬಡ ಜನರಿಗೆ ಉಚಿತ ಮತ್ತು ರಿಯಾಯಿತಿ ದರದಲ್ಲಿ ಆರೋಗ್ಯ ಸೇವೆ ನೀಡಲಾಗುವುದು.

* ಮುಂಗಡ ಹಣ ಪಾವತಿಯಿರುವುದಿಲ್ಲ.
* ವಾರ್ಡ್ ಬಾಡಿಗೆ ಉಚಿತ.
* ಪ್ರಯೋಗಾಲಯ ಪರೀಕ್ಷೆಯಲ್ಲಿ ಸಿಬಿಸಿ, ಆರ್‌ಬಿಎಸ್, ಮೂತ್ರ ಪರೀಕ್ಷೆ, ಕ್ಷ-ಕಿರಣ, ಇಸಿಜಿ, ಅಲ್ಟ್ರಸೌಂಡ್ ಸ್ಕ್ಯಾನ್ ಇವುಗಳು ಸಂಪೂರ್ಣ ಉಚಿತ.
* ವೈದ್ಯರ ವೆಚ್ಚದಲ್ಲಿ ಉಚಿತ ಹಾಗೂ ಶಸ್ತ್ರ ಚಿಕಿತ್ಸೆಯಲ್ಲಿ ಶೇ 50 ರಷ್ಟು ರಿಯಾಯಿತಿ ಇರುತ್ತದೆ.

ಸಾಮಾನ್ಯ ಮತ್ತು ಬಡ ಜನರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಕೋರಲಾಗಿದೆ.

- ಆಡಳಿತ ಮಂಡಳಿ





ದಿ|| ಪಿ.ಬಿ. ಷಣ್ಮುಖಪ್ಪ
ಮಾಜಿ ಗ್ರಾ.ಪಂ. ಉಪಾಧ್ಯಕ್ಷರು




ಪಿ.ಬಿ. ಚನ್ನಬಸಪ್ಪ
ಅಧೀಕ್ಷಕ ಇಂಜಿನಿಯರ್ (ನಿ)

ಬರಪೀಡಿತ ಪ್ರದೇಶವನ್ನು ಸಮೃದ್ಧ ನೀರಾವರಿ ಪ್ರದೇಶವನ್ನಾಗಿ ಮಾಡಿ ರೈತರ ಜೀವನಾಡಿಯಾಗಿ, ಜಗಳೂರು ವಿಧಾನಸಭಾ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿರುವ ಸರ್ವ ಜನಾಂಗದ ನಾಯಕ ಬಡವರ ಬಂಧು, ಯುವಕರ ಕಣ್ಮಣಿ, ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಿದ ಜನಪ್ರಿಯ ಶಾಸಕರು, ಕರ್ನಾಟಕ ರಾಜ್ಯ ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಮಂಡಳಿಯ ಅಧ್ಯಕ್ಷರು ಹಾಗೂ ನನ್ನ ಆತ್ಮೀಯರೂ ಆದ

**ಶ್ರೀ ಎಸ್. ವಿ. ರಾಮಚಂದ್ರ**

ಅಣ್ಣನವರಿಗೆ ಜನ್ಮದಿನದ ಶುಭಾಶಯಗಳು

ಶುಭ ಕೋರುವವರು :




**ಐಗೂರು ಹನುಮಂತಪ್ಪ**

ನಿರ್ದೇಶಕರು ನಾಯಕ ವಿದ್ಯಾರ್ಥಿ ನಿಲಯ ಹಾಗೂ
ಮುಖಂಡರು ಮಾಯಕೊಂಡ ವಿಧಾನಸಭಾ ಕ್ಷೇತ್ರ







# ಹುಟ್ಟು ಹಬ್ಬದ ಶುಭಾಶಯಗಳು

ಜಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು, ಹಟ್ಟಿ ಚಿನ್ನದ ಗಣಿ ನಿಗಮದ ಮಾಜಿ ಅಧ್ಯಕ್ಷರು, ರಾಷ್ಟ್ರೀಯ ಉಪಾಧ್ಯಕ್ಷರು, ಬಿಜೆಪಿ ಎಸ್.ಟಿ. ಮೋರ್ಚಾ, ಸರಳ, ಸಜ್ಜನಿಕೆಯ ರಾಜಕಾರಣಿಗಳು, ಕರ್ನಾಟಕ ಮಹರ್ಷಿ ಶ್ರೀ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ (ನಿ.)ದ ಅಧ್ಯಕ್ಷರಾಗಿರುವ ಕ್ರೀಡಾಭಿಮಾನಿಗಳು, ವಿಧಾನ ಸಭಾ ಕ್ಷೇತ್ರದ 57 ಕೆರೆಗಳ ತುಂಬಿಸುವ ಯೋಜನೆ ಮತ್ತು ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಸಂತೆಮುದ್ದಾಪುರ ಇತರೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ, ಮೂರೂ ಯೋಜನೆಗಳ ರೂವಾರಿ, ಅಭಿವೃದ್ಧಿ ಹರಿಕಾರರಾಗಿರುವ ಜನಪರ ಕಾಳಜಿಯ ನಮ್ಮ ನೆಚ್ಚಿನ ನಾಯಕರಾದ ಸನ್ಮಾನ್ಯ

## ಶ್ರೀ ಎಸ್.ವಿ.ರಾಮಚಂದ್ರ

ಅವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತಾ, ಶ್ರೀಯುತರಿಗೆ ಆಯುರಾರೋಗ್ಯ ಭಾಗ್ಯವನ್ನು ಸದಾ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ....



**ದಿನಾಂಕ : 16.01.2023ರ ಸೋಮವಾರ, ಸಮಯ : 10.30 ಗಂಟೆಗೆ ಸ್ಥಳ : ಬಯಲು ರಂಗ ಮಂದಿರ, ಜಗಳೂರು.**

## ಶಾಸಕರ ಅವಧಿಯಲ್ಲಿ ಅನುಷ್ಠಾನಗೊಂಡಿರುವ ಯೋಜನೆಯ ವಿವರಗಳು :

✧ **2019-20ರಲ್ಲಿ :** ಶ್ರೀ ತರಳಬಾಳು ಜಗದ್ಗುರು ಡಾ॥ ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ಹಾಗೂ ಶ್ರೀ ಜಿ.ಎಂ. ಸಿದ್ದೇಶ್ವರ ಸಂಸದರು ಇವರ ಸಹಕಾರದಿಂದ, ನಿಕಟ ಪೂರ್ವ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ಅಧಿಕಾರದ ಅವಧಿಯಲ್ಲಿ ಮಂಜೂರಾದ ಬರ ಪೀಡಿತ ಕ್ಷೇತ್ರದ ದಶಕಗಳ ಕನಸಿನ ಯೋಜನೆಯಾದ " 57 ಕೆರೆಗಳಿಗೆ ನೀರು ತುಂಬಿಸುವ ಯೋಜನೆ" ಈಗಾಗಲೇ ಕ್ಷೇತ್ರದಲ್ಲಿ ಅನುಷ್ಠಾನಗೊಳ್ಳುತ್ತಿದೆ. **ಒಟ್ಟು ಮೊತ್ತ -660.00 ಕೋಟಿ**

✧ **2021-22 ರಲ್ಲಿ :** ಜಗಳೂರು ತಾಲ್ಲೂಕಿಗೆ "ಭದ್ರೆ ಬರುವವರೆಗೂ ಇಲ್ಲ ನಿದ್ರೆ" ಎಂಬ ಮಾತಿನಂತೆ ಭದ್ರಾ ಮೇಲ್ದಂಡೆ ಯೋಜನೆಯ ಹೋರಾಟ ಸಮಿತಿ ಮತ್ತು ನಮ್ಮ ಕ್ಷೇತ್ರದ ಜನರ ಕನಸಿನ ಯೋಜನೆಯಾದ ಭದ್ರಾ ಮೇಲ್ದಂಡೆ ಯೋಜನೆಯನ್ನು ಈಗಿನ ಸರಳ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರ ಘನ ಸರ್ಕಾರದ ಅವಧಿಯಲ್ಲಿ ಮಂಜೂರಾದ 46 ಸಾವಿರ ಎಕರೆ ಪ್ರದೇಶಕ್ಕೆ ಹನಿ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಭದ್ರಾ ಮೇಲ್ದಂಡೆ ಯೋಜನೆ ಈಗಾಗಲೇ ಶಂಕುಸ್ಥಾಪನೆಯೊಂದಿಗೆ ಪ್ರಗತಿಯಲ್ಲಿರುತ್ತದೆ. **ಒಟ್ಟು ಮೊತ್ತ - 1450.00 ಕೋಟಿ**

✧ **2022-23 :** ಸುಮಾರು 10 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಯೋಜನೆಯಾದ ಜಗಳೂರು ತಾಲ್ಲೂಕಿನ ಸಂತೇಮುದ್ದಾಪುರ ಮತ್ತು 164 ಜನವಸತಿ ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರ ಘನ ಸರ್ಕಾರದ ಅವಧಿ ಯಲ್ಲಿ ಮಂಜೂರಾದ ಕಾಮಗಾರಿಯು ಈಗಾಗಲೇ ಟೆಂಡರ್ ಪ್ರಕ್ರಿಯೆಯಲ್ಲಿದೆ. **ಒಟ್ಟು ಮೊತ್ತ - 424.00 ಕೋಟಿ.**

✧ **2018-19 ರಿಂದ 2022-23ರವರೆಗೆ :** ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ತಂದಿರುವಂತಹ ಅನುದಾನ. (ಹರಪನಹಳ್ಳಿ ತಾಲ್ಲೂಕಿನ 7 ಪಂಚಾಯಿತಿಗಳನ್ನು ಒಳಗೊಂಡಂತೆ) **ಒಟ್ಟು ಮೊತ್ತ 190.31 ಕೋಟಿ.**

✧ **2018-19 ರಿಂದ 2022-23ರ ವರೆಗೆ :** ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪಿ.ಆರ್.ಇ.ಡಿ. ಇಲಾಖೆಯ ಮುಖಾಂತರ ಕೈಗೊಂಡಿರುವ ಗ್ರಾಮೀಣ ರಸ್ತೆಗಳು, ಕಾಲೋನಿಗಳಲ್ಲಿ ಸಿಸಿ ರಸ್ತೆ ನಿರ್ಮಾಣ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ತಂದಿರುವಂತಹ ಒಟ್ಟು ಅನುದಾನ. **ಒಟ್ಟು ಮೊತ್ತ 132.00.**

✧ **2018-19 ರಿಂದ 2022-23ರವರೆಗೆ :** ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪ್ರಧಾನ ಮಂತ್ರಿ ಗ್ರಾಮೀಣ ರಸ್ತೆಗಳ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ತಂದಿರುವಂತಹ ಒಟ್ಟು ಅನುದಾನ. **ಒಟ್ಟು ಮೊತ್ತ - 38.00 ಕೋಟಿ.**

✧ **2018-19 ರಿಂದ 2022-23ರವರೆಗೆ :** ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೆ.ಆರ್.ಐ.ಡಿ.ಎಲ್. ಇಲಾಖೆಯ ಮುಖಾಂತರ ಗ್ರಾಮಗಳಲ್ಲಿ ಸಿಸಿ ರಸ್ತೆ, ಶಾಲಾ ಕಟ್ಟಡ ಹಾಗೂ ಇತರೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕೆ ತಂದಿರುವಂತಹ ಒಟ್ಟು ಅನುದಾನ. **53.00 ಕೋಟಿ.**

✧ **2018-19 ರಿಂದ 2022-23ರವರೆಗೆ :** ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಿರ್ಮಿಸಿ, ಕೇಂದ್ರದ ಮುಖಾಂತರ ಪಟ್ಟಣದಲ್ಲಿ ನಿರ್ಮಾಣ ಹಂತದಲ್ಲಿರುವಂತಹ ಮಾದರಿ ವಾಲ್ಮೀಕಿ ಸಮುದಾಯ ಭವನ ಹಾಗೂ ಬಯಲು ರಂಗಮಂದಿರ ನಿರ್ಮಾಣ, ಉಚ್ಚಂಗಿದುರ್ಗ, ಅರಸೀಕೆರೆ ಗ್ರಾಮಗಳಲ್ಲಿ ಬಸ್ ನಿಲ್ದಾಣ ಹಾಗೂ ಭವನಗಳ ಕಾಮಗಾರಿಗಳನ್ನು ಒಳಗೊಂಡಂತೆ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ತಂದಿರುವಂತಹ ಒಟ್ಟು ಅನುದಾನ. **ಒಟ್ಟು ಮೊತ್ತ - 21.00 ಕೋಟಿ.**

✧ **2018-19 ರಿಂದ 2022-23ರವರೆಗೆ :** ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೆರೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ತಂದಿರುವಂತಹ **ಒಟ್ಟು ಅನುದಾನ. 18.00 ಕೋಟಿ.**

✧ **2018-19 ರಿಂದ 2022-23ರವರೆಗೆ :** ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಿಗೆ ಮನೆ ಮನೆಗೆ ಕುಡಿಯುವ ನೀರು ಕಲ್ಪಿಸಲು ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿ **ಒಟ್ಟು - 165.00 ಕೋಟಿ.**

✧ **2018-19 ರಿಂದ 2022-23ರವರೆಗೆ :** ಜಗಳೂರು ಪಟ್ಟಣದ ವ್ಯಾಪ್ತಿಯಲ್ಲಿ ದ್ವಿಮುಖ ರಸ್ತೆಗಳು ಹಾಗೂ ವಿದ್ಯುದೀಕರಣ ಹಾಗೂ ಇತರೆ ಪಟ್ಟಣದ ಸಂಪೂರ್ಣ ಅಭಿವೃದ್ಧಿ ಕಾಮಗಾರಿಗಳಿಗೆ ತಂದಿರುವಂತಹ **ಒಟ್ಟು ಅನುದಾನ - 10.00 ಕೋಟಿ.**

✧ **2018-19 ರಿಂದ 2022-23ರವರೆಗೆ :** ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಸತಿ ರಹಿತ ಕುಟುಂಬಗಳನ್ನು ಗುರುತಿಸಿ 4078 ಫಲಾನುಭವಿಗಳಿಗೆ ಮಂಜೂರಾತಿಯನ್ನು ನೀಡಲಾಗಿದೆ ಹಾಗೂ 1000 ನಿವೇಶನ ರಹಿತ ಫಲಾನುಭವಿಗಳಿಗೆ ಹಕ್ಕು ಪತ್ರ ನೀಡಲು ಗುರುತಿಸಲಾಗಿದೆ. **ಒಟ್ಟು ಮೊತ್ತ 61.00 ಕೋಟಿ.**

✧ **2018-19 ರಿಂದ 2022-23ರವರೆಗೆ :** ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಹೈ ಮಾಸ್ಟ್ ದಾರಿದೀಪ, ಸಿಸಿ ರಸ್ತೆ ಕಾಮಗಾರಿಗಳಿಗೆ ತಂದಿರುವಂತಹ **ಒಟ್ಟು ಅನುದಾನ - 22.00 ಕೋಟಿ.**

✧ **2021-22 ಮತ್ತು 2022-23ರವರೆಗೆ :** ನಿಕಟ ಪೂರ್ವ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ನನ್ನನ್ನು ಗುರುತಿಸಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ನೇಮಕ ಮಾಡಿದ ನಂತರ ನನ್ನ ಜಗಳೂರು. **ಒಟ್ಟು ಮೊತ್ತ - 49.00 ಕೋಟಿ.**

✧ ವಿಧಾನಸಭಾ ಕ್ಷೇತ್ರಕ್ಕೆ ವಿಶೇಷ ಅನುದಾನದಲ್ಲಿ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗವನ್ನು ಕಲ್ಪಿಸಿಕೊಂಡು ಆರ್ಥಿಕವಾಗಿ ಸಬಲರನ್ನಾಗಿ ಮಾಡುವ ಉದ್ದೇಶದಿಂದ ಫಲಾನುಭವಿಗಳನ್ನು ಆಯ್ಕೆ ಮಾಡಿರುತ್ತೇನೆ.

✧ ಪರಿಶಿಷ್ಟ ಪಂಗಡದ ಸಣ್ಣ ರೈತರಿಗೆ ವೈಯಕ್ತಿಕ ಕೊಳವೆ ಬಾವಿಯನ್ನು ಕೊರೆಯುವಂತಹ ಯೋಜನೆಯ ಒಟ್ಟು 664 ಫಲಾನುಭವಿಗಳನ್ನು ಆಯ್ಕೆ ಮಾಡಿರುತ್ತೇನೆ.

✧ ಪರಿಶಿಷ್ಟ ಪಂಗಡದ ಸಣ್ಣ ರೈತರಿಗೆ ವೈಯಕ್ತಿಕ ಕೊಳವೆ ಬಾವಿಯನ್ನು ಕೊರೆಯುವಂತಹ ಯೋಜನೆಯ ಒಟ್ಟು 664 ಫಲಾನುಭವಿಗಳನ್ನು ಆಯ್ಕೆ ಮಾಡಿರುತ್ತೇನೆ.

✧ ಪರಿಶಿಷ್ಟ ಪಂಗಡದ ಮಹಿಳೆಯರ ಸ್ವ ಸಹಾಯ ಸಂಘಗಳನ್ನು ಉತ್ತೇಜಿಸಲು ಪ್ರೇರಣಾ ಮೈಕ್ರೋ ಕ್ರೆಡಿಟ್ ಯೋಜನೆಯಲ್ಲಿ ಒಟ್ಟು 150 ಸಂಘಗಳ ಫಲಾನುಭವಿಗಳಿಗೆ ಸಹಾಯ ಧನ ನೀಡುವ ಯೋಜನೆಗಳನ್ನು ಒಳಗೊಂಡಂತೆ.

ಈ ಮೇಲ್ಕಂಡ ಇಲಾಖೆಗಳ ಜೊತೆಗೆ ತೋಟಗಾರಿಕೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪಶುಸಂಗೋಪನೆ, ಅಂಬೇಡ್ಕರ್ ಅಭಿವೃದ್ಧಿ ನಿಗಮ., ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ. ಕರ್ನಾಟಕ ವಸತಿ ಸಂಸ್ಥೆಗಳ ಸಂಘ ಹಾಗೂ ಇತರೆ ಎಲ್ಲಾ ಇಲಾಖೆಗಳ ಮುಖಾಂತರ ಕ್ಷೇತ್ರದ ಅಭಿವೃದ್ಧಿಗೆ ಒಟ್ಟಾರೆಯಾಗಿ **3500 ಕೋಟಿ** ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುತ್ತಾರೆ.

**ಹುಟ್ಟು ಹಬ್ಬದ ಅಂಗಾವಾಗಿ "ಜಿ.ಎಂ.ಸಿದ್ದೇಶ್ವರ್ ಕಪ್" ರಾಜ್ಯ ಮಟ್ಟದ ಪುರುಷರ ಮತ್ತು ಮಹಿಳೆಯರ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ ಜನವರಿ 16 ರಿಂದ 18ರವರೆಗೆ ಆಯೋಜಿಸಲಾಗಿದೆ.**

**ಶುಭ ಕೋರುವವರು : ಎಸ್.ವಿ.ಆರ್. ಅಭಿಮಾನಿ ಬಳಗ**

**ಭಾರತೀಯ ಜನತಾ ಪಕ್ಷ, ಜಗಳೂರು ವಿಧಾನಸಭಾ ಕ್ಷೇತ್ರ.**



JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte